ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 136

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಬುಧವಾರ: 06-05-2026

# ಶೃಂಗೇರಿಯಲ್ಲಿ ಮತ ಡಕಾಯಿತಿ ನಡೆದಿದೆ : ಸಿಎಂ ಗಂಭೀರ ಆರೋಪ

**ಬೆಂಗಳೂರು, ಮೇ 5–** ಶೃಂಗೇರಿ ಕ್ಷೇತ್ರದ ಅಂಚೆ ಪತ್ರಗಳ ಮರು ಎಣಿಕೆಯಲ್ಲಿ ಮತ ಗಳ್ಳತನವಷ್ಟೆ ಅಲ್ಲ, ಮತಗಳ ಡಕಾಯಿತಿ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದ್ದಾರೆ.



ಗೃಹ ಕಚೇರಿ ಕೃಷ್ಣದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ 2023ರ ಚುನಾವಣೆಯಲ್ಲಿ ಮತ ಯಂತ್ರಗಳ ಮೂಲಕ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ 58602 ಮತಗಳು, ಅಂಚೆ ಮೂಲಕ 569 ಮತಗಳು ಬಂದಿದ್ದವು.

ಎದುರಾಳಿ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್‌ಗೆ ಮತ ಯಂತ್ರಗಳ ಮೂಲಕ 58,278, ಅಂಚೆ ಮೂಲಕ 692 ಮತಗಳು ಬಂದಿದ್ದವು. 201 ಮತಗಳಿಂದ ರಾಜೇಗೌಡ ಗೆದ್ದಿದ್ದರು. ಮಾನ್ಯವಾದ ಅಂಚೆ ಮತಪತ್ರಗಳ ಬಗ್ಗೆ ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿ, ಏಜೆಂಟ್ ಗಳು ದೃಢೀಕರಿಸಿ ಸಹಿ ಮಾಡಿ, ಘೋಷಣೆ ಮಾಡಿದ್ದರು.

ಬಿಜೆಪಿ ಅಭ್ಯರ್ಥಿ ಚುನಾವಣಾ ಅಕ್ರಮವಾಗಿದೆ ಎಂದು ಹೈಕೋರ್ಟ್‌ನಲ್ಲಿ ದಾವೆ ಹೂಡಿ, ಮರು ಎಣಿಕೆಗೆ ಆಗ್ರಹಿಸಿದ್ದರು. ಅರ್ಜಿ ಪುರಸ್ಕರಿಸಿ ಹೈಕೋರ್ಟ್ 2026 ಮಾರ್ಚ್ 6ರಂದು ನಿರ್ದೇಶನ ನೀಡಿತ್ತು. 279 ಅಂಚೆ ಮತಪತ್ರಗಳು ಕಟ್ಟುನಿಟ್ಟಿನ 15 ಮಾರ್ಗಸೂಚಿಗಳು ಹಾಗೂ 14 ಉಪಮಾರ್ಗಸೂಚಿಗಳ ಮತ್ತು ಚುನಾವಣಾಧಿಕಾರಿಗಳ ಕೈಪಿಡಿ ನಿಯಮಗಳ ಪ್ರಕಾರ ಎಣಿಕೆ ಮಾಡುವಂತೆ ಸೂಚಿಸಿತ್ತು.

ಅಂಚೆ ಮತಪತ್ರಗಳಿಗೆ ಸಾಕಷ್ಟು ಪುರಾವೆ ಇದ್ದಾಗಿಯೂ ಅಮಾನ್ಯಗೊಳಿಸಿದ್ದರೆ, ಅದನ್ನು ಮರು ಎಣಿಕೆ ಮಾಡಬೇಕು. ಲೋಪಗಳು ಕಂಡು ಬಂದಿದ್ದರೆ ಚುನಾವಣಾಧಿಕಾರಿ ಕಡ್ಡಾಯವಾಗಿ ಎಲ್ಲಾ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಿ, ಇಲ್ಲವಾದರೆ ಫಲಿತಾಂಶವನ್ನು ಘೋಷಿಸಬೇಕು ಎಂದು ನಿರ್ದೇಶನ ನೀಡಿತ್ತು. ಅದರಂತೆ ಮರು ಎಣಿಕೆ ನಡೆದಿದೆ.

2023ರಲ್ಲಿ ಅಂಚೆ ಮೂಲಕ ಚಲಾವಣೆಯಾಗಿದ್ದ ಮತಗಳ ಪೈಕಿ ಟಿ.ಡಿ.ರಾಜೇಗೌಡರಿಗೆ 569 ದೊರೆತ್ತಿದ್ದವು. ಮರು ಎಣಿಕೆಯಲ್ಲಿ 314 ಮಾತ್ರ ಮಾನ್ಯವಾಗುತ್ತವೆ. 255 ಮತಗಳು ಕಡಿಮೆಯಾಗಿವೆ. ಇವು ಏಕೆ ಅಮಾನ್ಯವಾದವು ಎಂದು ಪ್ರಶ್ನಿಸಿದರು.

ಜೀವರಾಜ್ ಗೆ 692 ಅಂಚೆ ಮತಗಳು ದೊರೆತ್ತಿದ್ದರು. ಮರು ಎಣಿಕೆಯಲ್ಲಿ 690 ಸಿಕ್ಕಿವೆ. ಎರಡು ಕಡಿಮೆಯಾಗಿವೆ. ರಾಜೇಗೌಡರಿಗೆ 255 ಕಡಿಮೆಯಾಗಿವೆ. ಇದನ್ನು ನೋಡಿದಾಗ ಬಿಜೆಪಿಯವರು ಕ್ರಿಮಿನಲ್ ಸಂಚು ಮಾಡಿ, ಮತಗಳ್ಳತನ ಮಾಡಿರುವುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ ಎಂದರು.

ರಾಜೇಗೌಡರಿಗೆ ಬಿದ್ದ 255 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಒಂದು ಮಾರ್ಕ್ ಜೊತೆ ಮತ್ತೊಂದು ಮಾರ್ಕ್ ಇದ್ದರೆ ಅತಂಹ ಅಂಚೆ ಮತ ಪತ್ರವನ್ನು 2ನೇಪುಟಕ್ಕೆ

# ಕನ್ನಡ ಸಾಹಿತ್ಯ ಪರೀಷತ್ತಿನ 112 ನೇ ಸಂಸ್ಥಾಪನ ದಿನಾಚರಣೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಕನ್ನಡ ಸಾಹಿತ್ಯ ಪರೀಷತ್ ತಾಲೂಕು ಘಟಕದವತಿಯಿಂದ ಹಮ್ಮಿಕೊಂಡ ಕನ್ನಡ ಸಾಹಿತ್ಯ ಪರೀಷತ್ತಿನ 112 ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮವನ್ನು ಡಾ. ಅಂಬಿಕಾ ಮಧುಸೂಧನ್ ಕನ್ನಡಾಂಬೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿ ರಾಜ್ಯದಲ್ಲಿ ಕನ್ನಡ ಸಾಹಿತ್ಯ ಪರೀಷತ್ ಕನ್ನಡ ಭಾಷೆ,ಪರಂಪರೆ, ಸಾಹಿತ್ಯವನ್ನುಉಳಿಸಿ ಬೆಳೆಸುವ ನಿಟ್ಟಿನಲ್ಲಿ ಬಹುದೊಡ್ಡ ಕೊಡುಗೆಯನ್ನು ನೀಡುತ್ತಿದೆ ನಾಡಿನ ಅನೇಕ ಲೇಖಕರಿಗೆ, ಸಾಹಿತಿಗಳಿಗೆ ಉತ್ತಮ ಅವಕಾಶವನ್ನು ನೀಡುವ ಮೂಲಕ ನಮ್ಮ ನಾಡಿನ ಸಾಹಿತ್ಯ ಪರಂಪರೆಯನ್ನು ಬೆಳೆಸುತ್ತಿದೆ. ಗ್ರಾಮೀಣ ಭಾಗದ ತಾಯಂದಿರಲ್ಲಿ ಮೌಖಿಕ ವಾಗಿ ಉಳಿದಿರುವ ಜನಪದ ಸಾಹಿತ್ಯವನ್ನು ನಮ್ಮ ಮಕ್ಕಳಲ್ಲಿ 2ನೇಪುಟಕ್ಕೆ

# ಗಣತಿದಾರರು ಬಿಸಿಗಾಳಿಯ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲು ರಾಜ್ಯ ಜನಗಣತಿ ನೋಡಲ್ ಅಧಿಕಾರಿ ಮನೋಜ್ ಕುಮಾರ್ ಮೀನಾ ಸಲಹೆ



ಧೈರ್ಯದ ದಾರಿ


**ರಾಯಚೂರು ಮೇ.05:** ಭಾರತೀಯ ಹವಾಮಾನ ಇಲಾಖೆ ಬಿಡುಗಡೆ ಮಾಡಿದ 2026ರ ಬೇಸಿಗೆ ಕಾಲದ (ಏಪ್ರಿಲ್–ಜೂನ್ 2026) ಪರಿಷ್ಕೃತ ಋತು ಮುನ್ನೋಟದ ಪ್ರಕಾರ 2026ರ ಏಪ್ರಿಲ್–ಮೇ ತಿಂಗಳಲ್ಲಿ ಕರ್ನಾಟಕದ ಉತ್ತರ ಒಳನಾಡಿನ ಬಹುಭಾಗಗಳಲ್ಲಿ ಮತ್ತು ರಾಜ್ಯದ ಇತರ ಒಳನಾಡು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ತಾಪಮಾನ ಮುಂದುವರಿಯುವ ಸಾಧ್ಯತೆಯಿದ್ದು, ಜನಗಣತಿ ಕಾರ್ಯಗಳಲ್ಲಿ ತೊಡಗಿರುವ ಗಣತಿದಾರರು ಬಿಸಿಗಾಳಿಯ ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕೆಂದು ಪರಿಹಾರ ಆಯುಕ್ತರು ಮತ್ತು ಕಂದಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ರಾಜ್ಯ ಜನಗಣತಿ ನೋಡಲ್ ಅಧಿಕಾರಿಗಳಾದ ಮನೋಜ್ ಕುಮಾರ್ ಮೀನಾ ಅವರು ಸಲಹೆ ನೀಡಿದ್ದಾರೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 23ನೇ ಏಪ್ರಿಲ್ 2026ರ ಪತ್ರದ ಮೂಲಕ ಎಲ್ಲಾ ರಾಜ್ಯಗಳಿಗೆ ಬಿಸಿಗಾಳಿಯ ದುಷ್ಪರಿಣಾಮಗಳನ್ನು ಕಡಿಮೆಗೊಳಿಸಲು ಸೂಕ್ತ ಸಿದ್ಧತೆ ಮತ್ತು ಜಾಗೃತಿ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದೆ. ಇದರೊಂದಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು 28ನೇ ಏಪ್ರಿಲ್ 2026ರ ತನ್ನ ಪತ್ರದ ಮೂಲಕ ಬಿಸಿಗಾಳಿ ಸಿದ್ಧತೆ ಮತ್ತು ಪ್ರತಿಕ್ರಿಯೆಯನ್ನು ಬಲಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸಿದೆ.

ಪ್ರಸ್ತುತ ಜನಗಣತಿಯ ಮೊದಲ ಹಂತವಾಗಿ ಮನೆಪಟ್ಟಿ ಮತ್ತು ಮನೆ ಗಣತಿಯನ್ನು ರಾಜ್ಯದಾದ್ಯಂತ ಕ್ಷೇತ್ರ ಗಣಕರ ಮೂಲಕ ನಡೆಯುತ್ತಿದೆ. ಈ ಕಾರ್ಯಗಳು ಬೇಸಿಗೆಯ ತೀವ್ರ ಬಿಸಿಗಾಳಿ ಅವಧಿಯಲ್ಲಿ ನಡೆಯುತಿದ್ದು, ದೀರ್ಘಕಾಲ ಹೊರಾಂಗಣದಲ್ಲಿ ಕೆಲಸ ಮಾಡುವುದರಿಂದ ಮತ್ತು ಶಾರೀರಿಕ ಶ್ರಮದಿಂದ ಉಷ್ಣ ಸಂಬಂಧಿತ ಅನಾರೋಗ್ಯದ ಅಪಾಯ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಗಣತಿದಾರರ ಆರೋಗ್ಯ ಕಾಪಾಡಿಕೊಳ್ಳುತ್ತಾ ಜನಗಣತಿ ಕಾರ್ಯವನ್ನು ಸುಗಮವಾಗಿ ನಡೆಸಲು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವುದು ಅಗತ್ಯವಾಗಿದೆ. ಆದ್ದರಿಂದ ಉಷ್ಣ ಸಂಬಂಧಿತ ಅಪಾಯಗಳನ್ನು ತಗ್ಗಿಸಲು ಮತ್ತು ಗಣತಿ ಕಾರ್ಯವನ್ನು ಸುಗಮವಾಗಿ ನಡೆಸಲು ಕೆಳಗಿನ ಮುನ್ನೆಚ್ಚರಿಕಾ ಕ್ರಮಗಳನ್ನು ಎಲ್ಲಾ ಗಣತಿದಾರರು ಕಟ್ಟುನಿಟ್ಟಾಗಿ ಪಾಲಿಸಬೇಕು. 2ನೇಪುಟಕ್ಕೆ►

# ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ: ಜಿಲ್ಲಾಧಿಕಾರಿ ನಿತೀಶ್ ಕೆ.

ಧೈರ್ಯದ ದಾರಿ



**ರಾಯಚೂರು ಮೇ.05–** ಬೇಸಿಗೆ ದಿನಗಳಲ್ಲಿ ಕುಡಿಯುವ ನೀರಿನ ಕೊರತೆಯಾಗದಂತೆ ಪರಿಸ್ಥಿತಿಯನ್ನು ಅವಲೋಕಿಸಲು ಜಿಲ್ಲೆಯ ಪ್ರತಿ ತಾಲೂಕಿಗೆ ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಗ್ರಾಮಗಳ ಹಾಗೂ ಮುಂಬರುವ ದಿನಗಳಲ್ಲಿ ಸಮಸ್ಯೆ ಎದುರಿಸಬಹುದಾದ ಗ್ರಾಮಗಳ ವಿವರಗಳನ್ನು ಸಂಬಂಧಪಟ್ಟ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು, ಸದರಿ ತಮ್ಮ ತಮ್ಮ ತಾಲೂಕುಗಳ ಎಲ್ಲಾ ಸಮಸ್ಯಾತ್ಮಕ ಗ್ರಾಮಗಳಿಗೆ ಕಡ್ಡಾಯವಾಗಿ ಭೇಟಿ ನೀಡಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ.ಅವರು ಸೂಚಿಸಿದ್ದಾರೆ.

ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಿ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗೂ ನೋಡಲ್ ಅಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ ಜಿ.ಪಿ.ಎಸ್ ಭಾವಚಿತ್ರದೊಂದಿಗೆ ತೆಗೆದುಕೊಂಡ ಪೋಟೋಗಳೊಂದಿಗೆ ತಾವು ತೆಗೆದುಕೊಂಡ ಕ್ರಮಗಳ ಕುರಿತು ವರದಿಯನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ಅಂತರಾಷ್ಟ್ರೀಯ ಕಾರ್ಮಿಕ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಕಾನೂನು ಸೇವಾ ಸಮಿತಿ ಮಾನ್ವಿ ಹಾಗೂ ತಾಲೂಕು ನ್ಯಾಯವಾದಿಗಳ ಸಂಘ ಮತ್ತು ಕಾರ್ಮಿಕ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ಅಂತರಾಷ್ಟ್ರೀಯ ಕಾರ್ಮಿಕ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಸಿವಿಲ್ ನ್ಯಾಯಧೀಶರಾದ ಆನಂದ ಹೆಚ್.ಕೊಣ್ಣೂರು ಉದ್ಘಾಟಿಸಿ ಮಾತನಾಡಿ ಶೋಷಿತ ವರ್ಗವಾಗಿರುವ ಕಾರ್ಮಿಕರು ದೇಶದ ಬೆನ್ನೆಲುಬಾಗಿರುವ ಕಾರ್ಮಿಕರಿಗೆ ಸಂವಿಧಾನದಲ್ಲಿ ಅನೇಕ ಹಕ್ಕುಗಳನ್ನು ,ಗೌರವವನ್ನು ಕಾರ್ಮಿಕ ಕಾಯ್ದೆಯಡಿಯಲ್ಲಿ ನೀಡಲಾಗಿದೆ ಸಮಾನ ಕೆಲಸಕ್ಕೆ ಸಮಾನವಾದ ವೇತನ, ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸುರಕ್ಷತೆ, ಕೆಲಸದ ನಿಗದಿತ ಸಮಯದ ಮಿತಿ,ಸೇರಿದಂತೆ ಕಾರ್ಮಿಕರಿಗೆ ಅನೇಕ ಕಾಯ್ದೆಗಳನ್ನು ನೀಡಲಾಗಿದೆ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಕಟ್ಟಡ ಕಾರ್ಮಿಕರ ಕಾಯ್ದೆಗಳಿದ್ದು ಕಾರ್ಮಿಕರಿಗೆ ಬಹುಳಷ್ಟು ಅನುಕೂಲವಾಗುತ್ತಿದೆ ಕಟ್ಟಡ ಕಾರ್ಮಿಕರ ಮಕ್ಕಳ ಮದುವೆ,ವಿದ್ಯಾಭ್ಯಾಸಕ್ಕೆ ,ಹೆರಿಗೆ,ಸೇರಿದಂತೆ ಕೆಲಸದ ಸ್ಥಳದಲ್ಲಿ ಅಪಘಾತ ಸಂದರ್ಭದಲ್ಲಿ ಸೌಲಭ್ಯ ಮತ್ತು ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ನೀಡಲಾಗಿದೆ. ಕಾರ್ಮಿಕರು ತಮ್ಮಗೆ ಅನುಕೂಲವಾಗಿರುವ ಕಾನೂನುಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಾಗ ಮಾತ್ರ ಅವುಗಳಿಂದ ಪರಿಹಾರವನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಆರ್ಥಿಕವಾಗಿ ಹಿಂದುಳಿದಿರುವ ಕಾರ್ಮಿಕರು ಉಚಿತ ಕಾನೂನು ನೆರವನ್ನು ತಾಲೂಕು ಕಾನೂನು ಸೇವಾ ಸಮಿತಿಯ ಮೂಲಕ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ ಎಂದು ತಿಳಿಸಿದರು.

ತಾಲೂಕು ಕಾರ್ಮಿಕ ನಿರೀಕ್ಷಕರಾದ ಮಲ್ಲಪ್ಪ ದೊರೆ ಮಾತನಾಡಿ ದೈಹಿಕ,ಮಾನಸಿಕ,ಬೌದಿಕವಾಗಿ ಶ್ರಮವಾಹಿಸಿ ದುಡಿಯುವ ಕಾರ್ಮಿಕರು ಶೇ 30 ರಷ್ಟು ಇದ್ದರೆ.ಕಟ್ಟಡ ಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಕಾರ್ಮಿಕ ಇಲಾಖೆಯಿಂದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದು ಅವುಗಳ ಸದುಪಯೋಗವನ್ನು ಕಾರ್ಮಿಕರು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಸಹಾಯಕ ಸರಕಾರಿ ಅಭಿಯೋಜಕರಾದ ಅರ್ಚನಾಯಾದವ್ ಮಾತನಾಡಿದರು ಸ್ಥಳಿಯವಾಗಿರುವ ವಿವಿಧ ಅಂಗಡಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಂಸ್ಥೆಯವರು ಕಡ್ಡಾಯವಾಗಿ ಅದೇಶ ಪತ್ರವನ್ನು ನೀಡಬೇಕು.ವಾರಕ್ಕೆ ಒಮ್ಮೆ ರಜೆ ನೀಡಬೇಕು. ಕನಿಷ್ಟ 15 ಸಾವಿರ ವೇತನ ನೀಡಬೇಕು. ಹಾಜರತಿ ಇಡಬೇಕು, 8 ತಾಸಿಗಿಂತ ಹೆಚ್ಚಿನ ಸಮಯ ಕೆಲಸವನ್ನು ಮಾಡಿದಲ್ಲಿ ಹೆಚ್ಚುವರಿ ವೇತನ ನೀಡಬೇಕು, ಮಹಿಳೆಯರಿಗೆ ಹೆರಿಗೆ ವೇತನ ಸಹಿತ ರಜೆ ನೀಡಬೇಕು, ಸುಧಾರಿತ ಸುರಕ್ಷ ಸಲಾಕರಣೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಾರ್ಮಿಕರಿಗೆ ನೀಡಬೇಕು ಕಾರ್ಮಿಕ ಕಾಯ್ದೆಗಳನ್ನು ಉಲ್ಲಾಂಘಿಸುವ ಮಾಲಿಕರ ಮೇಲೆ ಕಾರ್ಮಿಕ ಕಾಯ್ದೆ ಅಡಿಯಲ್ಲಿ ಕಾರ್ಮಿಕ ಇಲಾಖೆಯ ನಿರೀಕ್ಷಕರು ಅಗತ್ಯ ಕ್ರಮ ಕೈಗೊಳ್ಳುತ್ತಾರೆ ಎಂದು ತಿಳಿಸಿದರು.ತಾಲೂಕು ಪಂಚಾಯಿತಿ ಇ.ಓ. ಖಾಲಿದ್ ಆಹ್ಮದ್.ಪಿ.ಐ. ಸೋಮಶೇಖರ ಎಸ್.ಕೆಂಚರೆಡ್ಡಿ, ತಾಲೂಕು ನ್ಯಾಯವಾದಿಗಳ ಸಂಘದ ಉಪಾಧ್ಯಕ್ಷರಾದ ವಿಶ್ವನಾಥ ರಾಯಪ್ಪ, ಪ್ರ.ಕಾರ್ಯದರ್ಶಿ ಯಲ್ಲಪ್ಪ ಹಿರೆಬಾದರದಿನ್ನಿ, ಹಿರಿಯ ವಕೀಲರಾದ ಶ್ರೀದೇವಿ ಬಳಿಗಾರ.ಅಮೃತ ವಕೀಲರು ಹಾಗೂ ಕಾರ್ಮಿಕ ಮುಖಂಡರಾದ ಪರಶುರಾಮ ಬಾಗಲವಾಡ, ಎಂ.ಡಿ.ಜಾಫರ್, ತಾಯಪ್ಪ,ಆಂಜನೇ ಯ್ಯ ಕೋಟೆ,ವೆಂಕಣ್ಣ ಸೇರಿದಂತೆ ನೂರಾರು ಕಾರ್ಮಿಕರು ಭಾಗವಹಿಸಿದರು.

# ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲ ವತಿಯಿಂದ ಸಂಭ್ರಮಾಚಾರಣೆ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಬಸವ ವೃತ್ತದಲ್ಲಿ ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲ ವತಿಯಿಂದ ಬಿಜೆಪಿ ಪಕ್ಷವು ದೇಶದ ವಿವಿಧ ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ , ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಅಭೂತಪೂರ್ವ ಜಯಗಳಿಸಿರುವುದಕ್ಕೆ ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ಸಂಭ್ರಮಾಚಾರಣೆ ನಡೆಸಲಾಯಿತು.

ಹಿರಿಯ ಮುಖಂಡರಾದ ಜೆ.ಸುಧಾಕರ್ ಮಾತನಾಡಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಪ್ರಧಾನಿ ನರೇಂದ್ರ ಮೋದಿಯವರ ಉತ್ತಮ ಆಡಳಿತದಿಂದಾಗಿ ಬಿಜೆಪಿ ಪಕ್ಷವು ಪಶ್ಚಿಮ ಬಂಗಾಳ , ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಉತ್ತಮ ಯಶಸ್ಸು ಪಡೆಯುವುದಕ್ಕೆ ಸಾಧ್ಯವಾಗಿದೆ ಎಂದು ತಿಳಿಸಿದರು.

ಯುವ ಮೋರ್ಚಾ ಅಧ್ಯಕ್ಷರಾದ ರವಿ ಕುಮಾರ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಶರಣಪ್ಪ ಗೌಡ ನಕ್ಕುಂದಿ, ಎಂ.ಶ್ರೀನಿವಾಸ್, ಜೆ.ಸುಧಾಕರ್ , ಜಗದೀಶ್ ಓತೂರ್,ವೀರನಗೌಡ ಪೋತ್ನಾಳ್ ವಕೀಲರು, ಹನುಮೇಶ ನಾಯಕ್ ಸಾದಾಪುರ, ಕುಮಾರಸ್ವಾಮಿ ಮೇದಾ, ಗೋಪಾಲ ಇಬರಾಂಪುರ್, ಈರಣ್ಣ, ಗುರುರಾಜ್ ನಾಗಲಾಪುರ್,ಶಿವಕುಮಾರ್ ಕೋನಾಪುರ್‌ಪೇಟೆ, ಶಂಭನಗೌಡ ಹಿರೆಕೊಟ್ನೇಕಲ್, ಅಮರೇಶ್ ಹರವಿ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದರು.

ಮೊದಲನೇ ಪುಟದಿಂದ

# ಶೃಂಗೇರಿಯಲ್ಲಿ ಮತ ಡಕಾಯಿತಿ ನಡೆದಿದೆ : ಸಿಎಂ ಗಂಭೀರ ಆರೋಪ

ಅಮಾನ್ಯಗೊಳಿ ಸಲಾಗುತ್ತದೆ. ಹಿಂದಿನ ಚುನಾವಣಾಧಿಕಾರಿ ಮಾನ್ಯ ಮಾಡಿದ್ದ ಮತಪತ್ರಗಳನ್ನು ಈಗ ಅಮಾನ್ಯ ಮಾಡಿದ್ದಾರೆ. ಇದು ಮತಗಳ್ಳತನ ಮಾತ್ರವಲ್ಲ, ಮತ ಡಕಾಯಿತು ಎಂದು ಆಕ್ರೋಶ ವ್ಯಕ್ತ ಪಡಿಸಿದರು.

201 ಮತಗಳಿಂದ ಸೋಲು ಕಂಡಿದ್ದ ಜೀವರಾಜ್ ಗೆ 52 ಮತಗಳು ಬಂದಿವೆ, ಈಗ ಗೆದ್ದಿದ್ದಾರೆ. ಈ ಬಗ್ಗೆ ತಾವು ಅಧಿಕಾರಿಗಳ ಹಾಗೂ ಚುನಾವಣಾ ತಜ್ಞರ ಜೊತೆ ಚರ್ಚೆ ಮಾಡಿದ್ದೇನೆ. ಹಿಂದೆ ಮತ ಎಣಿಕೆಯಾದಗ ಬಿಜೆಪಿ ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿತ್ತು. ಡಬ್ಬಲ್ ಇಂಜಿನ್ ಸರ್ಕಾರ ತಮ ಸಿಬ್ಬಂದಿಗಳ ಮೂಲಕ ಮತಗಳನ್ನು ತಿದ್ದಿಸಿರುವುದು ಖಚಿತವಾಗಿದೆ. ಇದು ಕ್ರಿಮಿನಲ್ ಸಂಚು ಮತ್ತು ಮತಚೋರಿಯಾಗಿದೆ ಎಂದು ಆರೋಪಿಸಿದರು.

ರಾಜೇಗೌಡರಿಗೆ 3ನೇ ಸುತ್ತಿನಲ್ಲಿ ಲಭಿಸಿದ್ದ 170 ಅಂಚೆ ಮತಗಳು ಅಮಾನ್ಯವಾಗಿವೆ. 2023ರ ಎಣಿಕೆಯಲ್ಲಿ ಇವು ಮಾನ್ಯವಾಗಿದ್ದವು. ಹಣ್ಣು ತಿಂದವನ್ನು ತಪ್ಪಿಸಿಕೊಂಡು, ಸಿಪ್ಪೆ ತಿಂದವನು ಸಿಕ್ಕಿ ಹಾಕಿಕೊಂಡ ಎಂದು ನಮ ಕಡೆ ಗಾದೆ ಇದೆ. ಅದರಂತೆ ಕೋತಿ ಮೊಸರು ತಿಂದು ಮೇಕೆ ಬಾಯಿಗೆ ಹೊರೆಸಿದಂತೆ ಬಿಜೆಪಿಯವರು ಮಾಡಿದ್ದಾರೆ. ಇದನ್ನು ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ, ರಾಜ್ಯ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸಮರ್ಥಿಸಿಕೊಂಡಿದ್ದಾರೆ.

2023ರ ಎಣಿಕೆಯಲ್ಲಿ ನಮ ಪಕ್ಷದಿಂದ ಸುಧೀರ್ ಕುಮಾರ್ ಮುರೋಳ್ಳಿ ಮತ ಎಣಿಕೆ ಏಜೆಂಟ್ ಆಗಿ ಸಹಿ ಹಾಕಿದ್ದಾರೆ. ಬಿಜೆಪಿ ಏಜೆಂಟ್, ಜೆಡಿಎಸ್ ಅಭ್ಯರ್ಥಿ ಸುಧಾಕರ್ ಶೆಟ್ಟಿ ಸಹಿ ಹಾಕಿದ್ದರು. ಆ ವೇಳೆ ಬಿಜೆಪಿ, ಜೆಡಿಎಸ್ ಮತ್ತು ಪಕ್ಷೆತರರು ಸೇರಿ ಯಾರು ಆಕ್ಷೆಪಣೆ ಸಲ್ಲಿಸಲಿಲ್ಲ ಎಂದರು.
ಚುನಾವಣೆಯಲ್ಲಿ ಒಟ್ಟು 12 ಜನ ಅಭ್ಯರ್ಥಿಓಗಳಾಗಿದ್ದರು. ರಾಜೇಗೌಡ ಮತ್ತು ಜೀವರಾಜ್ ಪ್ರಮುಖ ಅಭ್ಯರ್ಥಿಗಳಿದ್ದರು. ಜೆಡಿಎಸ್ ಅಭ್ಯರ್ಥಿ ಹಾಗೂ 9 ಪಕ್ಷೆತರರು ಕಣದಲ್ಲಿದ್ದರು.
ಮತಪತ್ರಗಳು ತಿದ್ದುಪಡಿಯಾಗಿರುವ ಬಗ್ಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿ, ನಿರ್ಧಾರ ತೆಗೆದುಕೊಳ್ಳುವಂತೆ ಮನವಿ ಮಾಡಬೇಕಿತ್ತು. ಆದರೆ ನೇರವಾಗಿ ಫಲಿತಾಂಶ ಪ್ರಕಟಿಸಲಾಗಿದೆ. ಇದು ಸರಿಯಲ್ಲ ಎಂದು ಆಕ್ಷೆಪಿಸಿದರು.

ಹಿಂದೆ ಬಿಜೆಪಿಯವರು ಚಿಲುಮೆ ಸಂಸ್ಥೆ ಮೂಲಕ ಮತದಾರರ ಪಟ್ಟಿಯನ್ನು ತಿದ್ದುಪಡಿ ಮಾಡಲು ಯತ್ನಿಸಿದ್ದರು. ಆಳಂದದಲ್ಲಿ ನೈಜ್ಯ ಮತದಾರರನ್ನು ತೆಗೆದು ಹಾಕಿದ್ದರು. ಬಿಜೆಪಿಯವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ. ಇಂತಹ ಅಕ್ರಮ ಮಾಡುವಲ್ಲಿ ಸಿದ್ಧ ಹಸ್ತರು ಎಂದು ವಾಗ್ದಾಳಿ ನಡೆಸಿದರು.

ಟಿ.ಡಿ.ರಾಜೇಗೌಡ ಅಕ್ರಮದ ಬಗ್ಗೆ ದೂರು ನೀಡಿದ್ದಾರೆ. ಅದಕ್ಕೆ ಜೀವರಾಜ್ ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆ ನೀಡಿದೆ. ನಮ ಪ್ರಕಾರ ಕ್ರಿಮಿನಲ್ ಸಂಚು ನಡೆದಿದೆ. ನಿಷ್ಪಕ್ಷಪಾತ ತನಿಖೆಯಾಗಬೇಕು. ನೀಡಿರುವ ದೂರಿನಂತೆ ಪೊಲೀಸರು ತಪ್ಪು ಮಾಡಿದ ಚುನಾವಣಾಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಲು ಅವಕಾಶ ಇದೆ ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಇಂತಹ ಕ್ರಿಮಿನಲ್ ಚಟುವಟಿಕೆ ದೇಶದ ಎಲ್ಲಿಯೂ ನಡೆದಿಲ್ಲ. ಸತ್ಯಾಂಶ ಹೊರ ಬರಲು ತನಿಖೆ ನಡೆಯಬೇಕು ಎಂದರು.

## ಕನ್ನಡ ಸಾಹಿತ್ಯ ಪರೀಷತ್ತಿನ 112 ನೇ ಸಂಸ್ಥಾಪನ ದಿನಾಚರಣೆ

ಅದರ್ಶಗುಣ ಉತ್ತಮ ಮೌಲ್ಯಗಳನ್ನು ಬೆಳೆಸುತ್ತಿವೆ. ನಮ್ಮ ಮಕ್ಕಳು ಅಮ್ಮ ಎಂದು ಕರೆದಾಗ ಸಿಗುವ ಸಂತೋಷ ಮಮ್ಮಿ ಎಂದು ಕರೆದಾಗ ದೊರೆಯುವುದಿಲ್ಲ ಸರಕಾರಿ ಶಾಲೆಗಳು ಕನ್ನಡ ಮಾತೃಭಾಷೆಯನ್ನು ಉಳಿಸುವ ಬಹುದೊಡ್ಡ ಕಾರ್ಯವನ್ನು ಮಾಡುತ್ತಿದು ಸರಕಾರಿ ಶಾಲೆಗಳಲ್ಲಿ ಕಸಾಪ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳುವ ಮೂಲಕ ನಮ್ಮ ಸಾಹಿತ್ಯ ಹಾಗೂ ಸಾಹಿತಿಗಳ ಪರಿಚಾಯವನ್ನು ಶಾಲಾ ಮಕ್ಕಳಿಗೆ ಮಾಡಿಸಬೇಕಾಗಿದೆ ಇಂದಿನ ಅಧುನಿಕ ಯುಗದಲ್ಲಿ ಕನ್ನಡ ಭಾಷೆಯ ಡಿಜಟಲೀಕರಣ ಮಾಡುವುದರಿಂದ ಮಕ್ಕಳಿಗೆ ಶಿಶು ಸಾಹಿತ್ಯ ಬೇಗನೆ ತಲುಪುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.
ಹಿರಿಯ ವರದಿಗಾರರಾದ ಬಸವರಾಜ ಭೋಗವತಿ ಉಪನ್ಯಾಸ ನೀಡಿ ಸಮಾಜದಲ್ಲಿ ಸಾಹಿತಿಗಳಿಗೆ ಬರಹಾಗಾರರಿಗೆ ,ಲೇಖಕರಿಗೆ ಮಹಾತ್ವದ ಸ್ಥಾನವನ್ನು,ಸಮಾಜಿಕ ಬದ್ದತೆಯನ್ನು, ಜವಾಬ್ದಾರಿಯನ್ನು ನೀಡಲಾಗಿದೆ ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಸಾಹಿತ್ಯ ಸಮ್ಮೆಳನಗಳನ್ನು ಅಯೋಜಿಸುವ ಮೂಲಕ ಕನ್ನಡ ಜಾತ್ರೆಯನ್ನು ಮಾಡುತ್ತಿದೆ. ನಲ್ವಾಡಿ ಕೃಷ್ಣರಾಜ ಒಡೆಯರ್ ಅವರು ಕನ್ನಡ ಸಾಹಿತ್ಯ ಪರೀಷತ್ ಸ್ಥಾಪನೆಗೆ ಬಹುದೊಡ್ಡಕೊಡುಗೆಯನ್ನು ನೀಡಿದ್ದಾರೆ. ದಾಸಸಾಹಿತ್ಯದ ತವರೂರಾದ ರಾಯಚೂರು ಜಿಲ್ಲೆಯಲ್ಲಿ 70 ರ ದಶಕದಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಶಾಂತರಸಾರು.ಚನ್ನಬಸಪ್ಪ ಬೆಟ್ಟದೂರು,ಭದ್ರವಾದ ಬುನಾದಿಯನ್ನು ಹಾಕಿದರೆ ನಂತರದಲ್ಲಿ ರಾಜಶೇಖರ ನೀರಮಾನ್ವಿ.ಅಮರೇಶ ನುಗಡೋಣಿ,ಚಿದಾನಂದ ಸಾಲಿ,ಶಿವರಾಜ ಬೆಟ್ಟದೂರು,ಆರೀಫ್ ರಾಜ,ಹನುಮಂತಸಂಗೋಳ್ಳಿ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಗಡಿಭಾಗದ ಕನ್ನಡ ಶಾಲೆಗಳ ಸುಧಾರಣೆ, ತಾಲೂಕಿನಲ್ಲಿ ಕಥೆ ಕಾವ್ಯ ಕಮ್ಮಟಗಳ ಅಯೋಜನೆ,ದತ್ತಿ ಉಪನ್ಯಾಸಗಳ ಜೋತೆಯಾಗಿ ಅಯೋಜಿಸಬೇಕಾಗಿದೆ. ಕಸಾಪ ಕನ್ನಡ ಸಾಹಿತ್ಯ ಪರೀಷತ್ ಕನ್ನಡಪರ ಚಟುವಟಿಕೆಗಳ ಜೋತೆಯಾಗಿ ಜನಪರ ಹೋರಾಟಗಳಲ್ಲಿ ಕೂಡ ಭಾಗಿಯಾಗಬೇಕಾಗಿದೆ. ಪಟ್ಟಣದ ವಿವಿಧ ರಸ್ತೆ,ವೃತ್ತಗಳಿಗೆ .ಗ್ರಂಥಾಲಯಗಳಿಗೆ ಕನ್ನಡ ಸಾಹಿತಿಗಳ ಹೆಸರುಗಳನ್ನು ಇಡಬೇಕು ಹಾಗೂ ಯುವ ಸಾಹಿತಿಗಳ ಪುಸ್ತಕಗಳನ್ನು ಗ್ರಂಥಾಲಯಗಳು ಖರೀದಿ ಮಾಡುವುದಕ್ಕೆ ಸಾಹಯಧನ ನೀಡಬೇಕು ಎಂದು ತಿಳಿಸಿದರು.
ಜಿಲ್ಲಾ ಕಸಾಪ ಗೌ,ಕಾರ್ಯದರ್ಶಿ ತಾಯಪ್ಪ ಬಿ ಹೋಸೂರು ಮಾತನಾಡಿ ಕನ್ನಡ ಸಾಹಿತ್ಯ ಪರೀಷತ್ ನಾಡಿನಲ್ಲಿ ಕಳೆದ 112 ವರ್ಷಗಳಿಂದ ಕನ್ನಡ ,ನಾಡು,ನುಡಿ,ಭಾಷೆಗಾಗಿ,ನೆಲ,ಜಲಗಳಿಗೆ ಧಕ್ಕೆಯಾದಾಗ ಹೋರಾಟ ಮಾಡುತ್ತ ಬಂದಿದೆ. ಕಸಾಪ ಕೇವಲ ಸಾಹಿತಿಗಳಿಗೆ ಮಾತ್ರ ಸಿಮೀತವಾಗದೆ ನವಸಾಹಿತಿಗಳಿಗೂ ಕೂಡ ಪ್ರೋತ್ಸಾಹವನ್ನು ನೀಡುವ ಕಾರ್ಯವನ್ನು ಮಾಡುತ್ತಬಂದಿದೆ ಎಂದು ತಿಳಿಸಿದರು.
ತಾ.ಕನ್ನಡ ಸಾಹಿತ್ಯ ಪರೀಷತ್ ಅಧ್ಯಕ್ಷರಾದ ಶರಣಬಸವ ನೀರಮಾನ್ವಿ ತಾಲೂಕು ಕನ್ನಡ ಸಾಹಿತ್ಯ ಪರೀಷತ್ ಚಟುವಟಿಕೆಗಳ ಬಗ್ಗೆ ಮಾತನಾಡಿದರು.
ಕಾರ್ಯಕ್ರಮದಲ್ಲಿ ಹತ್ತನೆ ತರಗತಿಯಲ್ಲಿ ಕನ್ನಡ ವಿಷಯದಲ್ಲಿ 125 ಅಂಕಗಳನ್ನು ಪಡೆದ ತಾಲೂಕಿನ 32 ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.
ಕಸಾಪ ಹೋಬಳಿ ಘಟಕದ ಅಧ್ಯಕ್ಷರಾದ ಹನುಮಂತಪ್ಪ ಕೋಟ್ನೆಕಲ್, ಬಿ.ವಿ.ರೆಡ್ಡಿ, ಡಾ.ಸೈಯಾದ್ ಮುಜೀಬ್ ಅಹ್ಮದ್, ನಾಗರತ್ನ ಪಾಟೀಲ್ , ಕನಿಪ ಸಂಘದ ತಾ.ಅಧ್ಯಕ್ಷ ಆಶೋಕ ತಡಕಲ್ , ಗೋವಿಂದರಾಜ್ ವಕೀಲರು, ಮಂಜುನಾಥ ಕಮತರ್, ಚನ್ನಬಸವರಾಜ ಮಾಡಗೇರಿ,ರಾಮುಹೋಳೆಯಪ್ಪ, ಲಕ್ಷ್ಮಣ ಜಾನೇಕಲ್, ಬಾಲಜಿ ಸಿಂಗ್ ಸೇರಿದಂತೆ ಇನ್ನಿತರರು ಭಾಗವಹಿಸಿದರು.

## ಉಪಚುನಾವಣೆ: ಕಾಂಗ್ರೆಸ್ ಗೆಲುವಿಗೆ ಹರ್ಷ

**ಕಲಬುರಗಿ,ಮೇ 5:** ಕರ್ನಾಟಕ ವಿಧಾನಸಭಾ ಉಪಚುನಾವಣೆಯಲ್ಲಿ ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಪಕ್ಷವು ಎರಡೂ ಸ್ಥಾನಗಳನ್ನು ಮರಳಿ ಪಡೆದಿರುವುದು ಮಾತ್ರವಲ್ಲದೆ, ಬಲವಾದ ಸಾರ್ವಜನಿಕ ಬೆಂಬಲವನ್ನು ಪ್ರತಿಬಿಂಬಿಸುವ ಪ್ರಭಾವಶಾಲಿ ಅಂತರದೊಂದಿಗೆ ಅದನ್ನು ಮಾಡಿದೆ ಎಂದು ಕಲಬುರಗಿ ಉತ್ತರ ಕ್ಷೇತ್ರದ ಶಾಸಕಿ ಕನೀಜ್ ಫಾತಿಮಾ, ಮತ್ತು ಕೆಪಿಸಿಸಿ ಸದಸ್ಯ ಫರಾಜ್ ಉಲ್ ಇಸ್ಲಾಂ ಅವರು ಹರ್ಷ ವ್ಯಕ್ತ ಪಡಿಸಿದ್ದಾರೆ.ಈ ಯಶಸ್ಸಿಗೆ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನಾಯಕತ್ವವೇ ಕಾರಣ. ಅವರ ಕಾರ್ಯತಂತ್ರದ ನಿರ್ದೇಶನ ಮತ್ತು ಆಡಳಿತವು ರಾಜ್ಯದಲ್ಲಿ ಪಕ್ಷದ ಸ್ಥಾನವನ್ನು ಬಲಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.ಈ ಜನಾದೇಶವು ಕಾಂಗ್ರೆಸ್ ಸರ್ಕಾರದ ಕಾರ್ಯಕ್ಷಮತೆಗೆ, ವಿಶೇಷವಾಗಿ ಕರ್ನಾಟಕದಾದ್ಯಂತ ಅದರ ಪ್ರಮುಖ "ಐದು ಭರವಸೆಗಳ" ಯಶಸ್ವಿ ಅನುಷ್ಠಾನಕ್ಕೆ ಸಾರ್ವಜನಿಕ ಅನುಮೋದನೆಯನ್ನು ಪ್ರತಿಬಿಂಬಿಸುತ್ತದೆ. ರೈತರು, ಯುವ ಸಬಲೀಕರಣ, ಶಿಕ್ಷಣ, ಅಭಿವೃದ್ಧಿ ಮತ್ತು ಸಾಮಾಜಿಕ ಉನ್ನತಿಯ ಮೇಲೆ ಸರ್ಕಾರವು ನಿರಂತರವಾಗಿ ಗಮನಹರಿಸುತ್ತಿರುವುದು ಮತದಾರರಲ್ಲಿ ಬಲವಾಗಿ ಪ್ರತಿಧ್ವನಿಸಿದೆ ಎಂದು ಅವರು ತಿಳಿಸಿದ್ದಾರೆ.

## ಭೀಮಾ ಮಿಷನ್ ಅಧ್ಯಯನ ತಂಡದ ಎರಡು ತಿಂಗಳ ಯಾತ್ರೆಯ ಆಘಾತಕಾರಿ ವರದಿ ಸಿದ್ಧ : ಶೀಘ್ರವೇ ಸರ್ಕಾರಕ್ಕೆ ಮಂಡನೆ

**ಆಳಂದ:ಮೇ.5:** ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೋಟ್ಯಂತರ ರೂಪಾಯಿ ವ್ಯಯಿಸಿ ನಿರ್ಮಿಸಲಾದ ಮಧ್ಯಮ ನೀರಾವರಿ ಯೋಜನೆಯ ಅಣೆಕಟ್ಟೆ ಮತ್ತು ಮುಖ್ಯ ಕಾಲುವೆಗಳು ಹಲವು ದಶಕಗಳ ಬಳಿಕವೂ ರೈತರ ಜಮೀನುಗಳಿಗೆ ಸರಿಯಾಗಿ ನೀರು ಒದಗಿಸದೇ ಇರುವ ಕಟು ವಾಸ್ತವ ಬಯಲಾಗಿದೆ.



ಕಲಬುರಗಿ, ಬೀದರ್ ಮತ್ತು ಯಾದಗಿರಿ ಶಾಶ್ವತ ನೀರಾವರಿ ಹೋರಾಟ ಸಮಿತಿಯ ಭೀಮಾ ಮಿಷನ್ ಅಡಿಯಲ್ಲಿ ನಡೆಸಲಾದ ಸುದೀರ್ಘ ಎರಡು ತಿಂಗಳ ಪಾದಯಾತ್ರೆ ಅಧ್ಯಯನ ಯಾತ್ರೆಯ ವರದಿ ಈಗ ಸಿದ್ಧಗೊಂಡಿದ್ದು, ಮೂರೂ ಜಿಲ್ಲೆಗಳ ನೀರಾವರಿ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿರುವ ಲೋಪ, ದುರ್ಲಕ್ಷ್ಯ ಮತ್ತು ಇಚ್ಚಾಶಕ್ತಿಯ ಕೊರತೆ ನಗ್ನ ಸತ್ಯವನ್ನು ವರದಿ ಹೊರಹಾಕಿದೆ.

ನಿಸ್ವಾರ್ಥ ಅಧ್ಯಯನ ತಂಡದ ಕಾರ್ಯ:

ಹಿರಿಯ ಹೋರಾಟಗಾರ ಮತ್ತು ಭೀಮಾ ಮಿಷನ್‌ನ ರೂವಾರಿ ಭೀಮಶೆಟ್ಟಿ ಮುಕ್ಕಾ ಅವರ ನೇತೃತ್ವದಲ್ಲಿ, ಹಿರಿಯ ಆರ್ಥಿಕ ತಜ್ಞ ಡಾ. ಬಸವರಾಜ ಕಮನೂರ ಮತ್ತು ಸಂಗಾತಿಗಳಾದ ಶಿವಶರಣಪ್ಪ ಟೆಂಗಳಿ, ರಾಜು ಜೈನ್, ಶಿವರಾಜ ಬಿರಾದಾರ, ಅಭಿ ಹಾಗೂ ಮಹೇಶ ಪಾಟೀಲ, ಪ್ರಿಯಾ ಹೊಸಗೌಡ ಒಳಗೊಂಡ ತಂಡವು ಯಾವುದೇ ಸರ್ಕಾರಿ ನೆರವಿಲ್ಲದೆ ಸ್ವಯಂಪ್ರೇರಣೆಯಿಂದ ಎರಡು ತಿಂಗಳ ಕಾಲ ಮೂರೂ ಜಿಲ್ಲೆಗಳ ಅಣೆಕಟ್ಟೆ, ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆಗಳನ್ನು ಪ್ರತ್ಯಕ್ಷ ತಪಾಸಣೆ ನಡೆಸಿ ಸ್ಥಳೀಯ ರೈತರ ಸಮಸ್ಯೆಗಳನ್ನು ಆಲಿಸಿ, ಅಂಕಿ ಅಂಶಗಳ ಸಂಗ್ರಹಿಸಿ ಸಮಗ್ರ ವರದಿ ಸಿದ್ಧಪಡಿಸಿದ್ದಾರೆ. ಇಂತಹ ನಿಸ್ವಾರ್ಥ ಸೇವೆ ಈ ಭಾಗದ ರೈತರ ನಿಜವಾದ ನೋವನ್ನು ದಾಖಲಿಸಿ ಸರ್ಕಾರದ ಮುಂದಿಡುವ ಮಹತ್ವದ ಕೆಲಸ ವಾಡಿದೆ ಎಂದು ಸ್ಥಳೀಯ ಜನ ಶ್ಲಾಘಿಸುವಂತಾಗಿದೆ.

ಏನಿದೆ ಕಲ್ಯಾಣ ಕರ್ನಾಟಕದ ನೀರಾವರಿ ಯೋಜನೆಗಳ ವಾಸ್ತವ?

ಕಲ್ಯಾಣ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಒಟ್ಟು 11 ಮಧ್ಯಮ ನೀರಾವರಿ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಅವು ಈ ಕೆಳಗಿನಂತಿವೆ:

ಕಲಬುರಗಿ ಜಿಲ್ಲೆ: ಅಫಜಲಪೂರ ತಾಲೂಕಿನ ಭೀಮಾ ಏತ ನೀರಾವರಿ, ಆಳಂದದ ಅಮರ್ಜಾ, ಕಮಲಾಪೂರ ಮುಲ್ಲಾಮರಿ ಕೆಳದಂಡೆ, ಗಂಡೋರಿ ನಾಲಾ, ಬೆಣ್ಣೆತೋರಾ, ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ

ಬೀದರ್ ಜಿಲ್ಲೆ: ಚುಳಕಿ ನಾಲಾ, ಕಾರಾಂಜಾ, ಮುಲ್ಲಾಮರಿ ಮೇಲ್ದಂಡೆ

ಯಾದಗಿರಿ ಜಿಲ್ಲೆ: ಸೌದಾಗರ್, ಹತ್ತಿಗುಣಿ ಅಣೆಕಟ್ಟೆಗಳು

ಈ ಎಲ್ಲಾ ಯೋಜನೆಗಳೂ ತಮ್ಮ ನಿಗದಿತ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದು ಅಧ್ಯಯನ ತಂಡದ ಕಟು ಅಭಿಪ್ರಾಯ.

ಭೀಮಾ ಏತ ನೀರಾವರಿ 49,000 ಎಕರೆ ಗುರಿ, ಕೇವಲ 20% ಮಾತ್ರ ಫಲ!

ಭೀಮಾ ಏತ ನೀರಾವರಿ ಯೋಜನೆಯಡಿ ಸುಮಾರು 49,000 ಎಕರೆ ಜಮೀನಿಗೆ ನೀರಾವರಿ ಕಲ್ಪಿಸಬೇಕಿತ್ತು. ಆದರೆ ವಾಸ್ತವದಲ್ಲಿ ಕೇವಲ ಶೇ. 20ರಷ್ಟು ಮಾತ್ರ ನೀರು ಬಳಕೆಯಾಗುತ್ತಿದೆ. ಚಂದ್ರಂಪಳ್ಳಿ ಅಣೆಕಟ್ಟೆಯಲ್ಲೂ ಇದೇ ಪರಿಸ್ಥಿತಿ ಇದ್ದು, ಶೇ. 20 ಬಳಕೆ ಮಾತ್ರ ನಡೆಯುತ್ತಿದೆ ಎಂದು ತಂಡ ಬಹಿರಂಗಪಡಿಸಿದೆ.

ಅಣೆಕಟ್ಟೆಗಳ ದುಃಸ್ಥಿತಿ: ಕಟ್ಟಿದ್ದು ಅಭಿವೃದ್ಧಿಗೋ, ನಿರ್ಲಕ್ಷ್ಯಕ್ಕೋ?

ಅಧ್ಯಯನ ತಂಡ ಸ್ಥಳ ಪರಿಶೀಲನೆ ನಡೆಸಿದಾಗ ಕಂಡುಬಂದ ಸಮಸ್ಯೆಗಳು ಹೀಗಿವೆ: ಕಾಲುವೆಗಳು ಮಣ್ಣು, ಗಿಡಗಂಟಿ ಮತ್ತು ಹುಲ್ಲಿನಿಂದ ತುಂಬಿ ಹೋಗಿ ನೀರು ಹರಿಯಲು ಅಸಾಧ್ಯವಾಗಿದೆ. ವಿತರಣಾ ಕಾಲುವೆಗಳು ಬಹುತೇಕ ಕಾರ್ಯಹೀನವಾಗಿದ್ದು ನೀರೇ ಹರಿಯುತ್ತಿಲ್ಲ.ಅಣೆಕಟ್ಟೆ ಪ್ರಾಂಗಣಗಳಲ್ಲಿ ಪೊದೆ ಮತ್ತು ಕಂಟಿಗಳು ಬೆಳೆದು ನಿರ್ವಹಣೆ ಸಂಪೂರ್ಣ ಶೂನ್ಯ, ಪ್ರವಾಸಿಗರು ಬಿಸಾಡಿದ ತ್ಯಾಜ್ಯ ಅಣೆಕಟ್ಟೆ ಪ್ರದೇಶದಲ್ಲಿ ಸಂಗ್ರಹವಾಗಿ ಪರಿಸರ ಮಾಲಿನ್ಯ ಉಂಟಾಗಿದೆ. ಚುಳಕಿ ನಾಲಾ ಅಣೆಕಟ್ಟೆ ಅತ್ಯಂತ ಕಳಪೆ ಗುಣಮಟ್ಟದ ನಿರ್ಮಾಣ ಹೊಂದಿದೆ. ಕಾಲುವೆಗಳ ಅಕ್ಕಪಕ್ಕದ ರಸ್ತೆಗಳು ಅವೈಜ್ಞಾನಿಕ ಮತ್ತು ಅಸಮರ್ಪಕವಾಗಿ ನಿರ್ಮಾಣಗೊಂಡಿವೆ. ಕಾಲುವೆಗಳ ನಿರ್ಮಾಣವೇ ಅವೈಜ್ಞಾನಿಕ ಎಂದು ತಂಡ ಕಟುವಾಗಿ ವಿಮರ್ಶಿಸಿದೆ.

ಅಧಿಕಾರಿಗಳ ನಿರ್ಲಕ್ಷ್ಯ ಮತ್ತು

ರಾಜಕೀಯ ಇಚ್ಚಾಶಕ್ತಿಯ ಕೊರತೆ:ಭೀಮಾ ಮಿಷನ್ ತಂಡ ಸ್ಪಷ್ಟವಾಗಿ ಹೇಳಿರುವಂತೆ, ಕಲ್ಯಾಣ ಕರ್ನಾಟಕದ ನೀರಾವರಿ ಯೋಜನೆಗಳು ವಿಫಲಗೊಳ್ಳಲು ಮುಖ್ಯ ಕಾರಣಗಳೆಂದರೆ, ಉನ್ನತ ಅಧಿಕಾರಿಗಳ ನಿರ್ಲಕ್ಷ್ಯ: ನಿರ್ವಹಣೆ ಮತ್ತು ಮೇಲ್ವಿಚಾರಣೆ ಸಂಪೂರ್ಣ ಕೊರತೆ ಇದ್ದು, ಕ್ಷೇತ್ರ ಅಧಿಕಾರಿಗಳು ಜವಾಬ್ದಾರಿ ಮರೆತಿದ್ದಾರೆ.ರಾಜಕೀಯ ಇಚ್ಚಾಶಕ್ತಿಯ ಅಭಾವ: ಸ್ಥಳೀಯ ಶಾಸಕರು ಮತ್ತು ಜನಪ್ರತಿನಿಧಿಗಳು ರೈತರ ನಿಜವಾದ ಸಮಸ್ಯೆಗಳ ಕಡೆ ತಮ್ಮ ಗಮನ ಹರಿಸದ ಪರಿಸ್ಥಿತಿ ಇದೆರೈತರ ನಿರುತ್ಸಾಹ: ದಶಕಗಳ ನಿರಾಸೆಯಿಂದ ರೈತ ಸಮುದಾಯ ಸ್ವತಃ ಹೋರಾಡುವ ಉತ್ಸಾಹ ಕಳೆದುಕೊಂಡಿದ್ದಾರೆ.ನೀರು ಬಳಕೆದಾರರ ಸಂಘಗಳ ನಿಷ್ಕ್ರಿಯತೆ: ಎಲ್ಲ ಅಣೆಕಟ್ಟೆಗಳಿಗೆ ನೀರು ಬಳಕೆದಾರರ ಸಂಘಗಳು ಅಸ್ತಿತ್ವದಲ್ಲಿ ಇದ್ದರೂ ರೈತರ ಜಾಗೃತಿ ಮತ್ತು ಸಂಘಟನೆ ಆಗಿಲ್ಲ.

ಅಮರ್ಜಾ ತುಂಬಿಸುವ ಯೋಜನೆ ದುಬಾರಿ ಆದರೆ ನಿರರ್ಥಕ?

ಭೀಮಾ ನದಿಯಿಂದ ಅಮರ್ಜಾ ಅಣೆಕಟ್ಟೆಗೆ ನೀರು ತರುವ ಯೋಜನೆ ಜಾರಿಯಲ್ಲಿದ್ದರೂ ಅದರ ಉಪಯುಕ್ತತೆ ಬಗ್ಗೆ ತಂಡ ಪ್ರಶ್ನೆ ಎತ್ತಿದೆ. "ಮಳೆಗಾಲದಲ್ಲಿ ಭೀಮಾ ನೀರು ಹರಿಯುವಾಗ ಅಮರ್ಜಾ ಅಣೆಕಟ್ಟೆಗೂ ಸ್ಥಳೀಯ ಮಳೆ ನೀರು ಬರುತ್ತದೆ. ಹಾಗಿರುವಾಗ ಈ ಯೋಜನೆ ಫಲಪ್ರದವಲ್ಲ" ಎಂದು ತಂಡ ವಾದಿಸಿದೆ. ಇಂತಹ ದೊಡ್ಡ ಯೋಜನೆಗಳ ಬದಲಿಗೆ ಸ್ಥಳೀಯ ಅಗತ್ಯಕ್ಕೆ ತಕ್ಕ ಪರ್ಯಾಯ ಮಾರ್ಗಗಳನ್ನು ಅನುಸರಿಸಬೇಕು ಎಂದು ಸಲಹೆ ನೀಡಿದೆ.

ಭೀಮಾ ಮಿಷನ್‌ನ ಪ್ರಮುಖ ಶಿಫಾರಸ್ಸುಗಳು: ಅಧ್ಯಯನ ತಂಡ ಸರ್ಕಾರಕ್ಕೆ ಮಂಡಿಸಲಿರುವ ಪ್ರಮುಖ ಶಿಫಾರಸ್ಸುಗಳು:

ಅಣೆಕಟ್ಟೆ ತುಂಬಿಸುವ ಯೋಜನೆಗಳ ಬದಲಿಗೆ ಅಗತ್ಯ ಸ್ಥಳಗಳಲ್ಲಿ ಚೆಕ್‌ಡ್ಯಾಂ, ಬ್ರಿಡ್ಜ್ ಕಂ–ಬ್ಯಾರೇಜ್ ನಿರ್ಮಾಣ ಮಾಡಬೇಕು. ಹಳ್ಳಿಗಳಲ್ಲಿ ಬರಡಾಗಿ ಉಳಿದಿರುವ ಸಣ್ಣ ಕೆರೆಗಳನ್ನು ಪುನರ್ಜೀವನ ಮಾಡಬೇಕು. ಕಾಲುವೆಗಳ ಸಮರ್ಪಕ ಸ್ವಚ್ಛತೆ ಮತ್ತು ನಿರ್ವಹಣೆ ಕ್ರಮ ಕೈಗೊಳ್ಳಬೇಕು.ನೀರು ಬಳಕೆದಾರರ ಸಂಘಗಳ ಮೂಲಕ ರೈತರಿಗೆ ನೀರು ಬಳಕೆ ತರಬೇತಿ ಮತ್ತು ಜಾಗೃತಿ** ಮೂಡಿಸಬೇಕು. ರೈತರು ನೀರನ್ನು ಅನಾವಶ್ಯಕ ಹರಿಬಿಡದೆ ಶಿಸ್ತುಬದ್ಧ ನೀರಾವರಿ ಅನುಸರಿಸುವಂತೆ ಪ್ರೇರೇಪಿಸಬೇಕು. ಕಾಲುವೆ ನಿರ್ಮಾಣ ಮತ್ತು ದುರಸ್ತಿಯಲ್ಲಿ ವೈಜ್ಞಾನಿಕ ವಿಧಾನ ಅಳವಡಿಸಬೇಕು.

ಮುಂದಿನ ಹೆಜ್ಜೆ: ಸರ್ಕಾರಕ್ಕೆ ಮಂಡನೆ: ಭೀಮಾ ಮಿಷನ್ ತಂಡ ಸಿದ್ಧಪಡಿಸಿದ ವರದಿಯನ್ನು ಹಂತ ಹಂತವಾಗಿ ಮಂಡಿಸಲು ಕ್ರಮ ಕೈಗೊಳ್ಳಲಾಗಿದ್ದು:ಮೊದಲು ಆಯಾ ಜಿಲ್ಲಾಧಿಕಾರಿಗಳಿಗೆ ಸ್ಥಿತಿಗತಿ ವಿವರಿಸಿ ಭೇಟಿ ನೀಡಲಾಗುವುದು. ನಂತರ ಸ್ಥಳೀಯ ಶಾಸಕರಿಗೆ ಭೇಟಿ ನೀಡಿ ಜಾಗೃತಿ ಮೂಡಿಸಲಾಗುವುದು. ಅಂತಿಮವಾಗಿ ರಾಜ್ಯದ ನೀರಾವರಿ ಸಚಿವರು ಮತ್ತು ಮುಖ್ಯಮಂತ್ರಿಗಳಿಗೆ ನಿಯೋಗದ ಮೂಲಕ ಅಧಿಕೃತ ವರದಿ ಮಂಡಿಸಲಾಗುವುದು

ತಳಮಟ್ಟದ ಧ್ವನಿ: "ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಕಟ್ಟಿದ ಅಣೆಕಟ್ಟೆ ರೈತರ ಜಮೀನಿಗೆ ನೀರು ಕೊಡದಿದ್ದರೆ ಅವು ಕಟ್ಟಿದ ಉದ್ದೇಶ ಈಡೇರಿದಂತೆ ಆಗುತ್ತದೆಯೇ? ಅಣೆಕಟ್ಟೆ ಕಟ್ಟಿದ್ದೇ ರೈತರ ಹೊಲಗಳಿಗೆ ನೀರು ಒದಗಿಸಲಿಕ್ಕೆ. ಅದೇ ಆಗದಿದ್ದರೆ ಅಣೆಕಟ್ಟೆ ಯಾಕೆ ಬೇಕು?"* ಎಂದು ಭೀಮಾ ಮಿಷನ್ ಸರ್ಕಾರಕ್ಕೆ ಮುಖಕ್ಕೆ ಹೊಡೆದಂತೆ ಕೇಳುತ್ತಿದೆ.

ಈ ಅಧ್ಯಯನ ವರದಿ ಕೇವಲ ಲೋಪಗಳ ಪಟ್ಟಿಯಲ್ಲ ರಾಜ್ಯ ಸರ್ಕಾರ ತಕ್ಷಣ ಎಚ್ಚೆತ್ತುಕೊಂಡು ಕಲ್ಯಾಣ ಕರ್ನಾಟಕದ ಬರಡು ಭೂಮಿಯ ರೈತರ ಬದುಕಿಗೆ ನೀರು ಉಣಿಸಬೇಕೆಂಬ ಒಂದು ಸಮಾಜ ಮನಸ್ಸಾಕ್ಷಿಯ ಕರೆ.

## ಯುವಕರು ದೇಶದ ಆಸ್ತಿ : ಉಪನ್ಯಾಸಕ ರಾಯಪ್ಪ ಡೋಣಗಾಂವ

**ಗುರುಮಠಕಲ್:ಮೇ.5:** ಯುವಕರು ದೇಶದ ಆಸ್ತಿ, ಇಂದಿನ ಮಕ್ಕಳು ದೇಶದ ಚಕ್ರಾದಿಪತಿಗಳಾಬೇಕು ಆದರೆ ವಿದ್ಯಾರ್ಥಿಗಳು ಚಟಗಳ ದಾಸರಾಗುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳ ದಾಸರಾಗ್ತಿದಾರೆ. ತಮ್ಮ ಶಕ್ತಿಯನ್ನು ವ್ಯರ್ಥ್ಯ ಮಾಡುತ್ತಿದ್ದಾರೆ. ಜೀವನದಲ್ಲಿ ಸಾಧನೆ ಬಹಳ ಮುಖ್ಯ, ಸಾಧಕರ ಸಾಲಿನಲ್ಲಿ ನೀವು ಕಾಣಿಸಿಕೊಳ್ಳಬೇಕು. ಇನ್ನೊಬ್ಬರ ಚಿಂತೆ ಬಿಡಿ, ನಿಮ್ಮ ಏಳಿಗೆಗೆ ಶ್ರಮಿಸಿ. ಸಮಯಪ್ರಜ್ಞೆ, ಶಿಸ್ತು, ನಾಯಕತ್ವ ಗುಣಗಳನ್ನು ಬೆಳಸಿಕೊಳ್ಳಿ ಎಂದು ಸುಲೇಪೇಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ರಾಯಪ್ಪ ಡೋಣಗಾಂವ ಅವರು ಅಭಿಪ್ರಾಯಪಟ್ಟರು. ಹರಿಜನವಾಡದಲ್ಲಿ ಸೋಮವಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್.ಎ ಘಟಕದಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಯಾರೊಂದಿಗು ಸ್ಪರ್ಧೆಗೆ ಇಳಿಯಬೇಡಿ, ಪ್ರತಿಯೊಬ್ಬರಿಗೂ ವಿಭಿನ್ನವಾಗಿರುವ ಸಾಮರ್ಥ್ಯವಿರುತ್ತದೆ. ನಮ್ಮೊಂದಿಗೆ ನಾವು ಸ್ಪರ್ಧೆಗೆ ಇಳಿದಾಗ ಮಾತ್ರ ಸಾಧಕರಾಗಲು ಸಾಧ್ಯ. ಎನ್ ಎಸ್ ಎಸ್



ಮನೋಸ್ಥೈರ್ಯ ಹೆಚ್ಚಿಸುವ ಕೆಲಸ ಮಾಡುತ್ತದೆ. ಯುವಕರೆ ನಮ್ಮ ದೇಶದ ಶಕ್ತಿ, ಕೌಶಲ್ಯವನ್ನು ಬೆಳೆಸಿಕೊಳ್ಳುವತ್ತ ಗಮನಹರಿಸಿ ಎಂದು ಪ್ರಾಂಶುಪಾಲ ಪ್ರೊ. ಜೆ.ವಿ. ಪುರುಷೋತ್ತಮ ಅಭಿಪ್ರಾಯಪಟ್ಟರು. ಹಿರಿಯ ಮುಖಂಡರಾದ ಕೆ. ದೇವಿದಾಸ್ ಅವರು ಅಂಬೇಡ್ಕರ್ ನಗರದಲ್ಲಿ ಆರೋಗ್ಯ, ಸ್ವಚ್ಛತೆಯ ಅರಿವು ಮೂಡಿಸಿದ ವಿದ್ಯಾರ್ಥಿಗಳ ಕಾರ್ಯ ಶ್ಲಾಘನೀಯ ಎಂದರು. ಎನ್ ಎಸ್ ಎಸ್ ಸಂಚಾಲಕ ಬಾಬುರಾಯ ದೊರೆ ಪ್ರಾಸ್ತಾವಿಕ ಮಾತನಾಡಿದರು. ಉತ್ತಮ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಿಲಾಯಿತು. ಶಿಬಿರಾರ್ಥಿಗಳಾದ ಶ್ರವಣಕುಮಾರ್‌ಮತ್ತು ನಿಂಗಯ್ಯ ಹಿರೇಮಠ ಅನಿಕೆ ವ್ಯಕ್ತಪಡಿಸಿದರು. ಉಪನ್ಯಾಸಕರಾದ ಮಹ್ಮದ್ ಇಮ್ರಾನ್ ಖಾಜಿ, ಮಹೇಶ್ ಚಂದಾಪೂರ, ಶ್ವೇತಾ ಎಂ.ಬಿ, ಬಿಚ್ಚಪ್ಪ. ಕೆ, ಕೃಷ್ಣ ಕೆ, ಬಾಲಪ್ಪ ಕಟ್ಟೆಲ್, ಸಂಗೀತಾ ನಾಗೂರ್, ವಿಜಯಲಕ್ಷ್ಮೀ ಪಾಟೀಲ್, ಇಮ್ತಾಯಾಜ್, ಪ್ರೇಮಲತಾ, ಶ್ರೀನಿವಾಸ, ಪ್ರವೀಣ. ಉಪಸ್ಥಿತರಿದ್ದರು. ಶಿಬಿರಾರ್ಥಿಗಳಾದ ಜ್ಯೋತಿ ಅವರ ತಂಡ ಶಿಬಿರ ಗೀತೆ ಹಾಡಿ, ಸನಾ ಕಾರ್ಯಕ್ರಮ ನಿರ್ವಹಿಸಿ, ನಿರ್ಮಲ ಸ್ವಾಗತಿಸಿ, ರಾಮುಲಮ್ಮ ವಂದಿಸಿದರು.

## ದಾವಣಗೇರೆ-ಬಾಗಲಕೋಟೆ ಉಪಚುನಾವಣೆ ಗೆಲುವು: ಜನಪರ ಯೋಜನೆಗಳಿಗೆ ಸಂದ ಜಯ : ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ



**ಯಾದಗಿರಿ:ಮೇ.5:** ದಾವಣಗೇರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಭರ್ಜರಿ ಗೆಲುವು ರಾಜ್ಯ ಸರ್ಕಾರದ ಜನಪರ ಯೋಜನೆಗಳು ಮತ್ತು ಕಾರ್ಯಕರ್ತರ ಅವಿರತ ಪರಿಶ್ರಮಕ್ಕೆ ಸಂದ ಫಲವಾಗಿದೆ ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ ಹೇಳಿದ್ದಾರೆ.ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ದಾವಣಗೇರೆ ದಕ್ಷಿಣ ಕ್ಷೇತ್ರದಿಂದ ಆಯ್ಕೆಯಾದ ಸಮರ್ಥ ಶಾಮನೂರು ಅವರು ತಮ್ಮ ಅಜ್ಜ ಶಾಮನೂರು ಶಿವಶಂಕರಪ್ಪ ಅವರ ರಾಜಕೀಯ ಪರಂಪರೆಯನ್ನು ಮುಂದುವರಿಸಿ ಅತಿ ಕಿರಿಯ ವಯಸ್ಸಿನ ಶಾಸಕರಾಗಿ ಹೊರಹೊಮ್ಮಿದ್ದಾರೆ ಎಂದು ಹೇಳಿದರು. ಅದೇ ರೀತಿ ಬಾಗಲಕೋಟೆಯಲ್ಲಿ ಉಮೇಶ್ ಮೇಟಿ ಅವರ ಆಯ್ಕೆ, ಅವರ ಕುಟುಂಬದ ರಾಜಕೀಯ ವರ್ಚಸ್ಸು ಹಾಗೂ ಕಾಂಗ್ರೆಸ್ ಪಕ್ಷದ ಬಲಿಷ್ಠ ನೆಲೆ ಮತ್ತಷ್ಟು ದೃಢಪಟ್ಟಿರುವುದನ್ನು ತೋರಿಸುತ್ತದೆ ಎಂದರು.

ಇರಡು ಕ್ಷೇತ್ರಗಳಲ್ಲಿಯೂ ಕುಟುಂಬದ ಸದಸ್ಯರ ಒಗ್ಗಟ್ಟಿನ ಪ್ರಚಾರ ಹಾಗೂ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಂದ ಆಕರ್ಷಿತರಾದ ಮಹಿಳಾ ಮತದಾರರ ಮಹತ್ತರ ಬೆಂಬಲ ದೊರೆತಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಜನಪರ ಆಡಳಿತ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನಾಯಕತ್ವಕ್ಕೆ ಜನತೆ ಮನ್ನಣೆ ನೀಡಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.

ಆಡಳಿತ ಪಕ್ಷದ ಸಕಾರಾತ್ಮಕ ಕಾರ್ಯಪದ್ಧತಿ, ಸಮರ್ಥ ರಾಜಕೀಯ ತಂತ್ರ ಹಾಗೂ ಗ್ಯಾರಂಟಿ ಯೋಜನೆಗಳು ಈ ಗೆಲುವಿಗೆ ಕಾರಣವಾಗಿದ್ದು, ಮೂರು ವರ್ಷಗಳಾದರೂ ವಿಪಕ್ಷಗಳು ಮಾಡಿದ ಟೀಕೆಗಳಿಗೆ ಜನರು ಸ್ಪಷ್ಟ ಉತ್ತರ ನೀಡಿದ್ದಾರೆ. ಬಿಜೆಪಿ-ಜೆಡಿಎಸ್ ಮೈತ್ರಿಗೆ ಈ ಫಲಿತಾಂಶ ಮುಖಭಂಗ ತಂದಿದೆ ಎಂದರು.

ರಾಜ್ಯದಲ್ಲಿ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಜನರ ಸಂಕಷ್ಟಕ್ಕೆ ಸ್ಪಂದಿಸಿರುವುದರಿಂದ ಉಪಚುನಾವಣೆಯಲ್ಲಿ ಉತ್ತಮ ಫಲಿತಾಂಶ ದೊರೆತಿದೆ. ಈ ಫಲಿತಾಂಶವು 2028ರ ವಿಧಾನಸಭೆ ಚುನಾವಣೆಗೆ ದಿಕ್ಸೂಚಿಯಾಗಿದ್ದು, ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

## ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿ ವಿಜಯ: ಯಾದಗಿರಿಯಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ



**ಯಾದಗಿರಿ:ಮೇ.5:** ಪಂಚರಾಜ್ಯಗಳ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಸಾಧಿಸಿದ ಗಮನಾರ್ಹ ಗೆಲುವಿನ ಹಿನ್ನೆಲೆಯಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಬಿಜೆಪಿ ಕಾರ್ಯಕರ್ತರು ಭರ್ಜರಿ ಸಂಭ್ರಮಾಚರಣೆ ನಡೆಸಿದರು. ಪಶ್ಚಿಮ ಬಂಗಾಳ, ಪುದುಚೇರಿ ಹಾಗೂ ಅಸ್ಸೋಂ ರಾಜ್ಯಗಳಲ್ಲಿ ಪಕ್ಷದ ಜಯಭೇರಿ ಮೊಳಗಿದ ಹಿನ್ನೆಲೆಯಲ್ಲಿ ನಗರದಲ್ಲಿ ಹರ್ಷೋಲ್ಲಾಸ ವ್ಯಕ್ತವಾಯಿತು.

ನಗರದ ಸುಭಾಷ್ ವೃತ್ತದಲ್ಲಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿಕೊಂಡು ಜಯೋತ್ಸವ ಆಚರಿಸಿದರು. "ದೀದಿ ಹೋದ್ರು, ದುರ್ಗಾ ಬಂದರು" ಎಂಬ ಘೋಷಣೆಗಳು ಮೊಳಗಿದರೆ, ಪಕ್ಷದ ಪರವಾಗಿ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪರವಾಗಿ ಜಯಕಾರಗಳು ಕೂಗಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ಪಂಚರಾಜ್ಯ ಚುನಾವಣಾ ಫಲಿತಾಂಶಗಳು ದೇಶದ ಮತದಾರರು ಪ್ರಧಾನಿ ಮೋದಿ ನೇತೃತ್ವದ ಆಡಳಿತಕ್ಕೆ ನೀಡಿದ ಬೆಂಬಲವನ್ನು ಸ್ಪಷ್ಟಪಡಿಸುತ್ತವೆ ಎಂದು ಅಭಿಪ್ರಾಯಪಟ್ಟರು. ಐದು ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಎನ್‌ಡಿಎ ನಾಲ್ಕು ರಾಜ್ಯಗಳಲ್ಲಿ ಸರ್ಕಾರ ರಚಿಸುವ ಸ್ಥಿತಿಯಲ್ಲಿದ್ದು, ಪಶ್ಚಿಮ ಬಂಗಾಳದಲ್ಲಿಯೂ ಪಕ್ಷದ ಪ್ರಭಾವ ಹೆಚ್ಚಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಸ್ಸೋಂನಲ್ಲಿ ಹ್ಯಾಟ್ರಿಕ್ ಜಯದೊಂದಿಗೆ ಮತ್ತೊಮ್ಮೆ ಸರ್ಕಾರ ರಚನೆ ಸಾಧ್ಯವಾಗಿದ್ದು, ಪುದುಚೇರಿಯಲ್ಲಿಯೂ ಎರಡನೇ ಬಾರಿ ಅಧಿಕಾರಕ್ಕೇರಲು ಸಾಧ್ಯವಾಗಿದೆ. ತಮಿಳುನಾಡಿನಲ್ಲಿಯೂ ಎನ್‌ಡಿಎ ಬೆಂಬಲದಿಂದ ಸರ್ಕಾರ ರಚನೆಗೆ ಅವಕಾಶವಿದೆ ಎಂದು ಮುಖಂಡರು ಹೇಳಿದರು.

ಈ ಸಂಭ್ರಮಾಚರಣೆಯಲ್ಲಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶರಡ್ಡಿ ಮುದ್ನಾಳ, ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ಅಲೆಮಾರಿ ಅರೆಅಲೆಮಾರಿ ನಿಗಮದ ಮಾಜಿ ಅಧ್ಯಕ್ಷ ದೇವಿಂದ್ರನಾಥ ನಾದ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರುಶುರಾಮ ಕುರುಕುಂದಿ, ವೆಂಕಟರೆಡ್ಡಿ ಅಬ್ಬೆತುಮಕೂರು, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ನಗರಸಭೆ ಮಾಜಿ ಅಧ್ಯಕ್ಷ ವಿಲಾಸ್ ಪಾಟೀಲ್,ಯುಡ ಮಾಜಿ ಅಧ್ಯಕ್ಷ ರುದ್ರುಗೌಡ ಪಾಟೀಲ್,ಡಾ.ಶರಣರಡ್ಡಿ ಕೊಡ್ಲ, ಶ್ರೀದೇವಿ ಶೆಟ್ಟಿಹಳ್ಳಿ, ರಮಾದೇವಿ ಕಾವಲಿ, ಸ್ವಾಮಿದೇವ ದಾಸನಕೇರಿ, ರಮೇಶ್ ದೊಡಮನಿ,ರಾಜುಸ್ವಾಮಿ ಅನಂಪಲೀ, ಅಪ್ಪಣ್ಣ ಜೈನ್,ಮಂಜುನಾಥ ಜಡಿ,ಗೊವಿಂದಪ್ಪ ಖಾನಾಪುರ, ಚನ್ನವಿರಯ್ಯ ಸ್ವಾಮಿ, ಲಕ್ಷ್ಮೀಪುತ್ರ ಮಾಲಿಪಾಟೀಲ,ಮೋನೇಶ ಬೇಳಿಗೇರ,ದೇವಿಂದ್ರಪ್ಪ ಯರಗೊಳ, ಮಹದೇವಪ್ಪ ಗಣಪುರ,ಸಾಬು ಬಗಲಿ, ಮಲ್ಲುಸ್ವಾಮಿ ಗುರುಸುಣಗಿ, ಶಿವರಾಜ ಗುತ್ತೇದಾರ್,ಸಾಲು ಯಡ್ಡಳ್ಳಿ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು..

## ಕರಾಟೆ ಸಾಧಕಿಗೆ ಶಾಹೀನ್‌ನಿಂದ ಉಚಿತ ಶಿಕ್ಷಣ



**ಬೀದರ್: ಮೇ.5:**ಕಿರಿಯ ವಯಸ್ಸಿನಲ್ಲೇ ಕರಾಟೆಯಲ್ಲಿ ಅಮೋಘ ಸಾಧನೆಗೈದ ಹೈದರಾಬಾದನ ಕಿಶನ್‌ಬಾನ್‌ನ ಬಹಾದ್ದೂರಪುರದ ಸಬಾ ಮಾಹೀನ್ ಖಾಜಾ ಮೊಯಿನುದ್ದೀನ್ ಅವರಿಗೆ ಇಲ್ಲಿಯ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹವು ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಉಚಿತವಾಗಿ ನೀಡುವುದಾಗಿ ಘೋಷಿಸಿದೆ.
ಇಲ್ಲಿಯ ಶಹಾಪುರ ಗೇಟ್ ಸಮೀಪದ ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಕಚೇರಿಗೆ ಭಾನುವಾರ ಕುಟುಂಬದ ಸದಸ್ಯರೊಂದಿಗೆ ಭೇಟಿ ನೀಡಿದ ಸಬಾ ಮಾಹೀನ್ ಅವರಿಗೆ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಅವರು ಶೈಕ್ಷಣಿಕ ನೆರವಿನ ಭರವಸೆ ನೀಡಿದರು.
ಪ್ರೌಢ ಹಾಗೂ ಪದವಿಪೂರ್ವ ಶಿಕ್ಷಣ ಸಂಪೂರ್ಣ ಉಚಿತವಾಗಿ ಕೊಡಲಾಗುವುದು. ವೈದ್ಯಳಾಗಲು ಬಯಸಿದ್ದಲ್ಲಿ ನೀಟ್ ತರಬೇತಿಯನ್ನೂ ನೀಡಲಾಗುವುದು ಎಂದು ತಿಳಿಸಿದರು.
ಹೈದರಾಬಾದನ ಗ್ರೇಸ್ ಎಕ್ಸೆಲ್ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಅಗ್ರಶ್ರೇಣಿಯಲ್ಲಿ ತೇರ್ಗಡೆಯಾಗಿರುವ ಸಬಾ ಮಾಹೀನ್ ತೆಲಂಗಾಣ ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ 22, ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಮೂರು ಚಿನ್ನದ ಪದಕ ಜಯಿಸಿದ್ದಾರೆ. ಮೇ 8 ರಿಂದ 10 ರ ವರೆಗೆ ಮಲೇಷ್ಯಾದಲ್ಲಿ ನಡೆಯಲಿರುವ 22ನೇ ವಿಶ್ವ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಅವರ ಸಾಧನೆ ಬಾಲಕಿಯರಿಗೆ ಮಾದರಿ ಹಾಗೂ ಪ್ರೇರಣೆಯಾಗಿದೆ ಎಂದು ಹೇಳಿದರು.
ವಿದ್ಯಾರ್ಥಿನಿ ತಂದೆ ಖಾಜಾ ಮೊಯಿನುದ್ದೀನ್, ಕೋಚ್ ಮಾಸ್ಟರ್ ಮೊಹಮ್ಮದ್ ಉಮರ್ ಇದ್ದರು.

## ಜಿಲ್ಲಾ ಉಸ್ತುವಾರಿ ಸಚಿವರಿಂದ ನಾನಾ ಅಭಿವೃದ್ಧಿ ಕಾಮಗಾರಿಗೆ ಚಾಲನೆ



**ವಿಜಯಪುರ, ಮೇ.5:** ನಗರದಲ್ಲಿ ಸೋಮವಾರ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲ ಅವರು ಚಾಲನೆ ನೀಡಿದರು.
ಬೆಳಿಗ್ಗೆ 10 ಗಂಟೆಗೆ ಗೋಲ್ ಗುಂಬಜ್ ನಿಂದ ಹಕೀಮ್ ಚೌಕ್ ವರೆಗೆ 2 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.
ಬಳಿಕ ವಾರ್ಡ್ ನಂ.18 ರಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ಪರಿಶಿಷ್ಟ ವರ್ಗಗಳ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ ಹಾಗೂ ಹರಣಶಿಖಾರಿ ಓಣಿಯಲ್ಲಿ ರಸ್ತೆ ಸುಧಾರಣೆ ಕಾಮಗಾರಿಗೆ ಚಾಲನೆ ನೀಡಿದರು.
ಅಲ್ಲಿಂದ ನೇರವಾಗಿ ಕಾಸಗೇರಿ ಖಾದಿ ಗ್ರಾಮೋದ್ಯೋಗ ಮಾರ್ಗವಾಗಿ ಮುಬೀನ್ ಸರ್ಕಲ್ ಅಥಣಿ ಗಲ್ಲಿ ಮುಖಾಂತರ ಕೇಂದ್ರ ಬಸ್ ನಿಲ್ದಾಣವರೆಗೆ ಒಳಚರಂಡಿ, ಮಳೆ ನೀರು ಚರಂಡಿ, ಅಲಂಕಾರಿಕ ಬೀದಿ ದೀಪ ಅಳವಡಿಸಿ ರಸ್ತೆ ಅಭಿವದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಿದರು.
ಈ ಸಂದರ್ಭದಲ್ಲಿ ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಗಂಗಾಧರ ಸಂಬಣ್ಣಿ ಮಹಾಪೌರ ಎಂ.ಎಸ್. ಕರಡಿ, ಪಾಲಿಕೆ ಸದಸ್ಯರು,ಪಾಲಿಕೆ ಆಯುಕ್ತರಾದ ವಿಜಯಕುಮಾರ ಮೆಕ್ಕಳಕಿ ಸೇರಿದಂತೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಇದ್ದರು.

## ಜಿಲ್ಲಾ ಉಸ್ತುವಾರಿ ಸಚಿವರ ನಿವಾಸಕ್ಕೆ ಜನಗಣತಿ ಅಧಿಕಾರಿಗಳು ಭೇಟಿ



**ವಿಜಯಪುರ, ಮೇ.5:** ವಿಜಯಪುರದಲ್ಲಿ ತಂಗಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವರಾದ ಎಂ. ಬಿ. ಪಾಟೀಲ ಅವರ ನಿವಾಸಕ್ಕೆ ಭೇಟಿ ನೀಡಿದ ಜನಗಣತಿ ಅಧಿಕಾರಿಗಳು ಭಾರತ ಜನಗಣತಿ 2027ರ ಮಾಹಿತಿ ವಿವರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ, ವಲಯ ಆಯುಕ್ತರಾದ ಎಚ್.ಎಸ್. ಚಿತ್ತರಗಿ ಗಣತಿದಾರರಾದ ನೀಲಮ್ಮ ಸಜ್ಜನ ಹಾಗೂ ಮೇಲ್ವಿಚಾರಕರಾದ ಸಿದ್ದಪ್ಪ ದಾನಿ ಹಾಗೂ ಕಂದಾಯ ನಿರೀಕ್ಷಕರಾದ ಕುಮಾರ ಚವಾಣ್ ಉಪಸ್ಥಿತರಿದ್ದರು ಎಂದು ಪ್ರಕಟಣೆಗೆ ತಿಳಿಸಿದೆ.

## ಮುಂದಿನ ಮಾರ್ಚ ಒಳಗಾಗಿ ಅನುಭವ ಮಂಟಪ ಲೋಕಾರ್ಪಣೆ:ಸಚಿವ ಈಶ್ವರ ಖಂಡ್ರೆ



**ಬೀದರ, ಮೇ.05:** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಸೋಮವಾರ ಬಸವಕಲ್ಯಾಣದ ಅನುಭವ ಮಂಟಪದ ಕಾಮಗಾರಿಯನ್ನು ಪರಿಶೀಲಿಸಿ, ಮುಂದಿನ ಮಾರ್ಚ ಒಳಗಾಗಿ ಅನುಭವ ಮಂಟಪ ಲೋಕಾರ್ಪಣೆಗೊಳಿಸಲಾಗುವುದು ಎಂದು ತಿಳಿಸಿದರು.

ಬಸವಾದಿ ಶರಣರು ಈ ಜಗತ್ತಿನ ಸರ್ವಶ್ರೇಷ್ಠ ದಾರ್ಶನಿಕರು, ಮಹಾ ಮಾನವತಾವಾದಿಗಳು, ಕಾಯಕವೇ ಕೈಲಾಸವನ್ನು ಅಳವಡಿಸಿಕೊಂಡು ಜಗತ್ತಿಗೆ ಪ್ರಥಮ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ನೀಡಿದರು. 770 ಕಂಬಗಳ ಮೇಲೆ 770 ಶರಣರ ವಚನಗಳನ್ನು ಕೆತ್ತಲಾಗುತ್ತಿದೆ. ವೈಜ್ಞಾನಿಕವಾಗಿ ನೆಮ್ಮದಿ ನೀಡುವಂಥ ಇಷ್ಟಲಿಂಗ ತರಬೇತಿ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. ಬದುಕನ್ನು ಹಸನಗೊಳಿಸಿಕೊಳ್ಳಲು ವೈಚಾರಿಕ ವಚನಗಳು ಸಹ ಆಧುನಿಕ ವಿಜ್ಞಾನ ತಂತ್ರಜ್ಞಾನ ಮೂಲಕ ಐಐಟಿ ವಿಜ್ಞಾನಿಗಳ ಮೂಲಕವಾಗಿ ಜನಸಾಮಾನ್ಯರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಕಾಯಕವೇ ಕೈಲಾಸ ಎಂದು ಹೇಳಿರುವ ಶರಣರ ಜೀವನವನ್ನು ಬಿಂಭಿಸುವ ಶರಣ ಗ್ರಾಮ ನಿರ್ಮಾಣಗೊಳ್ಳುತ್ತಿದೆ. ಈಗಿನ ಯುವಕರಿಗೆ ಅಗತ್ಯವಾದ ಕೌಶಲ್ಯ ತರಬೇತಿ ನೀಡುವ ಕೇಂದ್ರ ಆರಂಭಿಸಲಾಗುವುದು. ವೃತ್ತಿಯಲ್ಲಿ ಯಾವುದು ಮೇಲಿಲ್ಲ ಕೀಳಿಲ್ಲ ಎಂದು ಸಚಿವರು ತಿಳಿಸಿದರು.

ಅನುಭವ ಮಂಟಪಕ್ಕೆ ಹಣದ ಕೊರತೆ ಇಲ್ಲ, ಈವರೆಗೆ 480 ಕೋರಿ ರೂ. ಖರ್ಚಾಗಿದೆ. ನಮ್ಮ ಮುಖ್ಯಮಂತ್ರಿಗಳು ಈ ಪೈಕಿ 280 ಕೋಟಿ ರೂ. ಅನುದಾನ ನೀಡಿದ್ದಾರೆ. ಉಳಿದ ಹಣವನ್ನು ಸಹ ಶೀಘ್ರವೇ ಬಿಡುಗಡೆ ಮಾಡಲಿದ್ದಾರೆ. ಕಾಲಮಿತಿಯಲ್ಲಿ ಕಾಮಗಾತಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದರು.
ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಅನುಭವ ಮಂಟಪದ ಸಂಯೋಜಕರಾದ ಡಾ.ಬಾಬಾಸಾಹೇಬ್ ಗಡ್ಡೆ ಸೇರಿದಂತೆ ಗಣ್ಯ ಮಾನ್ಯರು ಉಪಸ್ಥಿತರಿದ್ದರು.

# ರಾಷ್ಟ್ರದ ರಕ್ಷಣೆಯಲ್ಲಿ ಅಗ್ನಿಶಾಮಕರ ಪಾತ್ರ ಅನನ್ಯ



**ಕಲಬುರಗಿ: ಮೇ.5:**ಬೆಂಕಿ ಅವಗಡ, ಭೂಕಂಪ, ಅತಿವೃಷ್ಟಿ, ನೆರೆ ಹಾವಳಿ, ಪ್ರವಾಹದಂತಹ ತುರ್ತು ಸಂದರ್ಭದಲ್ಲಿ ತಮ್ಮ ಜೀವದ ಹಂಗನ್ನು ತೊರೆದು ಸಾರ್ವಜನಿಕರ ಜೀವವನ್ನು ರಕ್ಷಿಸುವ ಅಗ್ನಿಶಾಮಕರು ಸಮಾಜದ ಕಾವಲುಗಾರ ಹಾಗೂ ರಕ್ಷಕರಾಗಿದ್ದಾರೆ. ಅವರಿಗೆ ಸಾರ್ವಜನಿಕ ಸುರಕ್ಷತೆ, ಸಮಾಜದ ರಕ್ಷಣೆಯೇ ಪ್ರಮುಖವಾಗಿದೆ.ರಾಷ್ಟ್ರದ ರಕ್ಷಣೆಯಲ್ಲಿ ಅಗ್ನಿಶಾಮಕರ ಪಾತ್ರ ಅನನ್ಯವಾಗಿದೆ ಎಂದು ಪ್ರಮುಖ ಅಗ್ನಿಶಾಮಕರಾದ ಅಸ್ಪಕ್ ಹುಸೇನ್ ಹೇಳಿದರು.

ನಗರದ ಅಗ್ನಿಶಾಮಕ ಠಾಣೆಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ' ಮತ್ತು ಅಗ್ನಿಶಾಮಕ ಠಾಣೆಯ ಜಂಟಿ ಆಶ್ರಯದಲ್ಲಿ ಸೋಮವಾರ ಸಂಜೆ ಏರ್ಪಡಿಸಿದ್ದ 'ಅಂತಾರಾಷ್ಟ್ರೀಯ ಅಗ್ನಿಶಾಮಕರ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಡಿಸೆಂಬರ್ 2, 1998 ರಂದು ಆಸ್ಟ್ರೇಲಿಯಾದ ಲಿಂಟನ್ ಪಟ್ಟಣದಲ್ಲಿ ಜರುಗಿದ ದುರಂತ ಘಟನೆಯಲ್ಲಿ, ಕಾಡ್ಗಿಚ್ಚನ್ನು ನಂದಿಸಲು ಪ್ರಯತ್ನಿಸುವಾಗ ಆಮ್ಸ್ಟಾಂಗ್, ಗ್ಯಾರಿ ವ್ರೆಡೆವೆಲ್ಡ್, ಕ್ರಿಸ್ ಇವಾನ್ಸ್, ಸ್ಟುವರ್ಟ್ ಡೇವಿಡ್ಸನ್, ಜೇಸನ್ ಥಾಮಸ್ ಎಂಬ ಐದು ಜನ ಅಗ್ನಿಶಾಮಕ ಸಿಬ್ಬಂದಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು. ಇಂತಹ ಸಿಬ್ಬಂದಿಗಳಿಗೆ ನಮನ ಸಲ್ಲಿಸಲು 'ಅಂತಾರಾಷ್ಟ್ರೀಯ ಅಗ್ನಿಶಾಮಕ ದಿನದ ಆಚರಣೆ ಪ್ರಾರಂಭವಾಯಿತು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ, ಅಗ್ನಿಶಾಮಕರು ತಮ್ಮ ಜೀವದ ಹಂಗನ್ನು ತೊರೆದು ಸಾರ್ವಜನಿಕರು, ಆಸ್ತಿ–ಪಾಸ್ತಿ, ಪಶು–ಪ್ರಾಣಿಗಳನ್ನು ರಕ್ಷಿಸುತ್ತಾರೆ. ಅಗ್ನಿಶಾಮಕ ತುರ್ತು ಸಂಖ್ಯೆಗ ಕರೆ ಮಾಡಿದ ತಕ್ಷಣ ವೇಗವಾದಿ ಧಾವಿಸಿ ತಮ್ಮ ರಕ್ಷಣಾ ಕಾರ್ಯ ಮಾಡುತ್ತಾರೆ. ರಕ್ಷಣೆಯ ಸಂದರ್ಭದಲ್ಲಿ ಅನೇಕ ಜನ ಸಿಬ್ಬಂದಿ ಪ್ರಾಣತ್ಯಾಗ ಮಾಡಿ, ಸಾರ್ವಜನಿಕರನ್ನು ರಕ್ಷಿಸುವ ಮೂಲಕ ತ್ಯಾಗಮಯಿಗಳಾಗಿದ್ದಾರೆ. ಆದ್ದರಿಂದ, ಅಗ್ನಿಶಾಮಕರಿಗೆ ಸಮಾಜದ ಪ್ರೋತ್ಸಾಹ, ಗೌರವ ನೀಡುವುದು ಅಗತ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಅಗ್ನಿಶಾಮಕ ಠಾಣಾಧಿಕಾರಿ ಪ್ರವೀಣ ಕಲಶೆಟ್ಟಿ, ಬಸವೇಶ್ವರ ಬಳಗದ ಗೌರವ ಸಲಹೆಗಾರ ಶಿವಯೋಗೆಪ್ಪಾ ಎಸ್.ಬಿರಾದಾರ, ಸದಸ್ಯರಾದ ಡಾ.ರಾಜಶೇಖರ ಪಾಟೀಲ, ಮಹಾಂತೇಶ ಬಿರಾದಾರ, ಶಿವಕುಮಾರ ಪಾಟೀಲ, ಅಗ್ನಿಶಾಮಕರಾದ ಹೊನ್ನಪ್ಪ ಹುಲ್ಲುರ, ಮಿರಾಜುದ್ದೀನ್ ಹುಮನಾಬಾದ, ಶರಣಪ್ಪ ದೇವಕ್ಕಿ, ಸಿದ್ದಪ್ಪ ಕಲ್ಲೂರ, ಶ್ರೀಕಾಂತ ಭಂಕೂರ, ಸಿಬ್ಬಂದಿ ವಿಜಯಕುಮಾರ ರಾಠೋಡ ಸೇರಿದಂತೆ ಮತ್ತಿತರು ಪಾಲ್ಗೊಂಡಿದ್ದರು.

# ವೈದ್ಯಕೀಯ– ಇಂಜಿನಿಯರಿಂಗ್ ಗಿಂತ ಕೃಷಿ ಪದವಿಗಳಿಗೆ ಬೇಡಿಕೆ ಹೆಚ್ಚು

**ಕಲಬುರಗಿ:ಮೇ.5:** ವೈದ್ಯಕೀಂಯು ಎಂಜಿನಿಯರಿಂಗ್ ಕೋರ್ಸ್ ಗಳಿಗಿಂತ ಕೃಷಿಗೆ ಸಂಬಂಧಿತ ಕೋರ್ಸ್ ಗಳಿಗೆ ಹೆಚ್ಚಿನ ಭವಿಷ್ಯ ಹಾಗೂ ಬೇಡಿಕೆಯಿದೆ ಎಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಯುವ ಘಟಕದ ರಾಷ್ಟ್ರೀಂಯು ಮಾಧ್ಯಮ ಸಂಂಯೋಜಕ ಚೇತನಗೌಡ ಎಸ್. ಗೋನಾಯಕ ಹೇಳಿದರು.




ನಗರದ ಸಂಗಮೇಶ್ವರ ಕಾಲೋನಿಯ ಪಂಚಮುಖಿ ಹನುಮಾನ ದೇವಸ್ಥಾನದ ಪಕ್ಕದಲ್ಲಿರುವ ಡಾ. ಬುಜುರ್ಕೆ ಅಕಾಡೆಮಿ ಆಯೋಜಿಸಿದ್ದ ಬಿಎಸ್ಸಿ ಅಗ್ರಿ ಕೋರ್ಸ್ ಮತ್ತು ಕೃಷಿಗೆ ಸಂಬಂಧಿಸಿದ ಕೋರ್ಸ್ ಗಳ ಪ್ರಾಯೋಗಿಕ (ಸಿಇಟಿ) ಪರೀಕ್ಷೆಯ ತರಬೇತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಹಿಂದುಳಿದ ಈ ಭಾಗದಲ್ಲಿ ಕೃಷಿಗೆ ಸಂಬಂಧಿತ ಕೋರ್ಸ್ ಗಳ ಪ್ರವೇಶಾತಿ ಕುರಿತು ಡಾಣ ಬುಜುರ್ಕೆ ಅಕಾಡೆಮಿ ತರಬೇತಿ ಕೊಡುತ್ತಿರುವುದು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕೋರ್ಸ್ ಗೆ ಆಯ್ಕೆಯಾಗುತ್ತಿರುವುದು ದೊಡ್ಡ ಕೊಡುಗೆ. ವಿದ್ಯಾರ್ಥಿಗಳಲ್ಲಿ ಪಿಯುಸಿ ನಂತರ ಮುಂದೇನು? ಎಂಬುದರ ಕುರಿತಾಗಿ ಸ್ಪಷ್ಟತೆ ಇರಬೇಕು. ಪ್ರಮುಖವಾಗಿ ಯಾರದ್ದೇ ನೋಡಿ ಹಾಗೂ ಒತ್ತಡಕ್ಕೆ ಒಳಗಾಗಿ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಡಿ, ಇಚ್ಛೆಯ ಕೋರ್ಸ್ ಸೇರಿ ಭವಿಷ್ಯ ರೂಪಿಸಿಕೊಳ್ಳಿ ಎಂದರು.

ರಾಜ್ಯದಲ್ಲಿ ಈಗ ಭರ್ತಿ ಮಾಡಿಕೊಳ್ಳಬೇಕೆಂದಿರುವ 52 ಸಾವಿರ ಹುದ್ದೆಗಳಲ್ಲಿ 36 ಸಾವಿರ ಕಲ್ಯಾಣ ಕರ್ನಾಟಕ ಭಾಗದ್ದಾಗಿವೆ. ಹೀಗಾಗಿ ಈ ಭಾಗದವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತಿರುವುದು ಅಭಿವೃದ್ಧಿಪೂರಕ. ಇಷ್ಟೊಂದು ಹುದ್ದೆಗಳು ದೊರಕಲು 371ಜೆ ವಿಧಿ ಜಾರಿಗೆ ತಂದಿರುವುದೇ ಕಾರಣ ಎಂದು ತಿಳಿಸಿದರು.

ಆಕಾಶವಾಣಿ ಕೇಂದ್ರದ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥರು ಹಾಗೂ ಹಿರಿಯ ಪತ್ರಕರ್ತ ಡಾ. ಸದಾನಂದ ಪೆರ್ಲ ಉಪನ್ಯಾಸ ನೀಡಿ, ಪ್ರಯತ್ನವೊಂದೇ ಸಾಧನೆಗೆ ಪೂರಕ. ಆಲಸ್ಯದಿಂದ ಏನು ಸಾಧನೆ ಮಾಡಲಾಗದು. ಪರೀಕ್ಷೆ ಬಂದಾಗೊಮ್ಮೆ ಓದಬೇಡಿ. ರೈತನೇ ಈ ಜಗತ್ತಿಗೆ ಆಧಾರ. ರೈತನಿಂದಲೇ ಎಲ್ಲರೂ ಎನ್ನುವುದು ಮತ್ತಷ್ಟು ಬಲಬಪಡಿಸಲು ತಾವು ಮುಂದಾಗಬೇಕು ಎಂದರು.

ಹಿರಿಯ ಪತ್ರಕರ್ತ ಹಣಮಂತರಾವ್ ಭೈರಾಮಡಗಿ ಮಾತನಾಡಿ, ಬಿಎಸ್ಸಿ ಕೃಷಿ ಪದವಿ ಸರ್ಕಾರಿ ನೌಕರಿ ಪಡೆಯಲು ಎಂಬುದನ್ನು ಇಟ್ಟುಕೊಳ್ಳದೇ ಕೃಷಿ ಕ್ಷೇತ್ರ ಬಲಪಡಿಸಲು ಪದವಿ ಪಡೆಯುವೆ ಎಂಬುದರ ಧ್ಯೇಯ ಇಟ್ಟುಕೊಳ್ಳಿ ಎಂದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ರಾಜು ತೆಗ್ಗಳ್ಳಿ ಮುಖ್ಯ ಅತಿಥಿಯಾಗಿ ಮಾತನಾಡಿ, ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್ ಗಳಿಗಿಂತ ಕೃಷಿ ಕೋರ್ಸ್ ಗಳೇ ಬೇಡಿಕೆ ಹೆಚ್ಚುತ್ತಿದೆ. ಹೀಗಾಗಿ ಹೆಚ್ಚಿನ ಆಸಕ್ತಿಯಿಂದ ಓದಿ. ಡಾ. ಬುಜುರ್ಕೆ ಅಕಾಡೆಮಿಯಲ್ಲಿ ಕೃಷಿಗೆ ಸಂಬಂಧಿಸಿದ ವಿವಿಧ ಕೋರ್ಸ್ ಗಳ ಪರಿಕರಗಳ ಲ್ಯಾಬ್ ಮತ್ತು ಮಾದರಿಗಳು ವಿದ್ಯಾರ್ಥಿಗಳ ಕಲಿಕೆಗೆ ಪರಿಣಾಮಕಾರಿಯಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ. ಬುಜುರ್ಕೆ ಅಕಾಡೆಮಿ ನಿರ್ದೇಶಕ ಡಾ. ಶಿವರಾಜ ಬುಜುರ್ಕೆ ಪ್ರಾಸ್ತಾವಿಕ ಮಾತನಾಡಿ, ಕಳೆದ 10 ವರ್ಷಗಳಿಂದ ಅಕಾಡೆಮಿಯಿಂದ ಕೃಷಿಗೆ ಸಂಬಂಧಿಸಿದ ವಿವಿಧ ಕೋರ್ಸ್ ಗಳ ಪ್ರಾಯೋಗಿಕ ಪರೀಕ್ಷೆ ಕುರಿತಾಗಿ ತರಬೇತಿ ನೀಡಲಾಗುತ್ತಿದೆ. ವರ್ಷಂಪ್ರತಿ ತಮ್ಮಲ್ಲಿ ತರಬೇತಿ ಪಡೆದವರಲ್ಲಿ 40–50 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಿಎಸ್ಸಿ ಕೃಷಿ ಪದವಿ ಕೋರ್ಸ್ ಗಳಿಗೆ ಆಯ್ಕೆಯಾಗುತ್ತಿದ್ದಾರೆ ಎಂದರು.

ಪ್ರಮುಖರಾದ ಸಿ.ಬಿ. ಹಿರೇಮಠ, ಚೇತನ ಬುಜುರ್ಕೆ, ಹರ್ಷವರ್ಧನ ಬುಜುರ್ಕೆ, ಸುಷ್ಮಾ ಬುಜುರ್ಕೆ ಸೇರಿದಂತೆ ಇತರರಿದ್ದರು. ಮಹೇಶ ಅರಳಿ ನಿರೂಪಿಸಿದರು.

ಕಲಬುರಗಿ ಜೋಳದ ರೊಟ್ಟಿ ವಿದೇಶಕ್ಕೆ ಹೋಗುತ್ತಿದ್ದು, ಹೀಗಾಗಿ ಕೃಷಿಯಲ್ಲೂ ಹೊಸತನದ ಅವಕಾಶ ಹುಡುಕಿ ಬಲಪಡಿಸುವುದು ಯುವಕರು ಅದರಲ್ಲೂ ಕೃಷಿ ಪದವಿ ಪಡೆದ ಹಾಗೂ ಪಡೆಯುವವರ ಮೇಲಿದೆ.

ಡಾ. ಸದಾನಂದ ಪೆರ್ಲ, ಹಿರಿಯ ಪತ್ರಕರ್ತ

# ನೀರು ಸರಬರಾಜಿಗೆ ಅಡ್ಡಿ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ:ಸಚಿವ ಈಶ್ವರ ಖಂಡ್ರೆ



**ಬೀದರ, ಮೇ.05:** ಬೇಸಿಗೆಯ ತಾಪದ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜಿಗೆ ಯಾವುದೇ ರೀತಿಯ ಅಡ್ಡಿಯನ್ನುಂಟು ಮಾಡುವವರ ವಿರುದ್ಧ ಅಧಿಕಾರಿಗಳು ಪ್ರಕರಣ ದಾಖಲಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಸೂಚಿಸಿದರು.

ಕುಡಿಯುವ ನೀರಿನ ಸಮಸ್ಯೆ ಕುರಿತು ಇಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡುತ್ತಾ, ಸರಕಾರದ ಅನುದಾನದಿಂದ ಖಾಸಗಿ ಜಮೀನಿನಲ್ಲಿ ಕೊರೆಯಿಸಿದ ಕೊಳವೆ ಭಾವಿ ಅಥವಾ ತೆರೆದ ಬಾವಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಸಂದರ್ಭದಲ್ಲಿ ಕೆಲವರು ಅಡ್ಡಿಯನ್ನುಂಟು ಮಾಡುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಯಾರು ಎಷ್ಟೇ ಪ್ರಭಾವಿಯಾಗಿರಲ್ಲಿ, ಶಕ್ತಿಶಾಲಿಯಾಗಿರಲಿ, ಕುಡಿಯುವ ನೀರು ಸರಬರಾಜು ಮಾಡಲು ಅಡ್ಡಿ ಪಡಿಸಿದವರ ವಿರುದ್ಧ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಪ್ರಕರಣ ದಾಖಲಿಸುವಂತೆ ಸಚಿವರು ಸೂಚಿಸಿದರು.

ಜಿಲ್ಲೆಯಲ್ಲಿ ಔರಾದ್, ಭಾಲ್ಕಿ, ಬಸವಕಲ್ಯಾಣ, ಕಮಲನಗರ ತಾಲ್ಲೂಕಿನಲ್ಲಿ ಹೆಚ್ಚಿನ ನೀರಿನ ಸಮಸ್ಯೆ ಕಂಡುಬಂದಿದೆ. ಔರಾದ್‌ನ 14 ಗ್ರಾಮಗಳು ಕಮಲನಗರ 11, ಬಸವಕಲ್ಯಾಣ 10, ಭಾಲ್ಕಿಯ 8 ಗ್ರಾಮ ಸೇರಿದಂತೆ 43 ಗ್ರಾಮಗಳಲ್ಲಿ ಸಧ್ಯಕ್ಕೆ ನೀರು ಸಮಸ್ಯೆ ಉಲ್ಬಣಗೊಂಡಿದೆ. ಮೇ ಕೊನೆಯುವರೆಗೆ ಸಮಸ್ಯೆ ತೀವ್ರವಾಗಬಹುದಾಗಿದೆ. ಅಧಿಕಾರಿಗಳು ಟ್ಯಾಂಕರ್ ಮೂಲಕ ನೀರು ಸರಬರಾಜು ಮುಂದುವರಿಸುವಂತೆ ಸೂಚಿಸಿದರು. ತೀರ ಅಗತ್ಯವಿದ್ದಲ್ಲಿ ಮಾತ್ರ ಹೊಸ ಕೊಳವೆ ಬಾವಿ ಕೊರೆಯಿಸಿ ಎಂದು ತಿಳಿಸಿದರು.

ಔರಾದ್‌ನ ತಾಂಡಾಗಲ್ಲಿ ಹೆಚ್ಚಿನ ಸಮಸ್ಯೆ ಕಂಡು ಬಂದಿದೆ. ನೀರಿನ ಮಟ್ಟ 700 ರಿಂದ 800 ಅಡಿವರೆಗೆ ಕುಸಿದಿದೆ. ಅಧಿಕಾರಿಗಳು ಕೊಳವೆಬಾವಿ ಪುನಶ್ಚೇತನ ಕಾರ್ಯಕೈಗೊಳ್ಳಬೇಕು. ಪ್ಲಶಿಂಗ್ ಹಾಗೂ ಡೀಪನಿಂಗ್ ಕಾರ್ಯಕೈಗೊಳ್ಳಬೇಕೆಂದು ತಿಳಿಸಿದರು.

ಸಮಸ್ಯಾತ್ಮಕ ಗ್ರಾಮಗಳ ವಾರ್ಡಗಳಲ್ಲಿ ಸ್ಥಳೀಯ ತಹಸೀಲ್ದಾರರು, ತಾಲ್ಲೂಕ ಪಂಚಾಯತ ಇಓ, ಪಿಡಿಓ ಹಾಗೂ ಗ್ರಾಮ ಲೆಕ್ಕಾಧಿಕಾರಿ ಬೆಳಿಗ್ಗೆ ಓಡಾಡಿ ನೀರು ಸರಬರಾಜು ಸ್ಥಿತಿಯನ್ನು ನಿಭಾಯಿಸಿ ನೇರವಾಗಿ ಮೋಟಾರು ಹಚ್ಚಿಕೊಳ್ಳುವವರ ಸರಬರಾಜು ಕಟ್ ಮಾಡುವಂತೆ ಸಚಿವರು ಸೂಚಿಸಿದರು.

ಗ್ರಾಮಗಳ ಅವಶ್ಯಕತೆಗನುಗುಣವಾಗಿ ಕಾರ್ಯನಿರ್ವಹಿಸಿ ಟ್ಯಾಂಕರ್ ಸರಬರಾಜು ಮಾಡುವುದರ ಬಿಲ್‌ಗಳನ್ನು ಸಕಾಲದಲ್ಲಿ ಪಾವತಿಸುವಂತೆ ಸೂಚಿಸದರು.

ಸದ್ಯಕ್ಕೆ ಮೇವಿನ ಕೊರತೆ ಇರುವುದಿಲ್ಲ. ಮುಂದಿನ 24 ವಾರಗಳಿಗೆ ಆಗುವಷ್ಟು ಮೇವು ದಾಸ್ತಾನು ಇದೆ. ಜಾನುವಾರುಗಳಿಗೆ ನೀರು ಸಮಸ್ಯೆ ಆಗದಂತೆ ಕಾರಂಜಾ ಹಾಗೂ ಚುಳಕಿ ಜಲಾಶಯಗಳಿಂದ ನೀರು ಬಿಡಲು ಸೂಚಿಸಿದರು.

ಮುಂಗಾರು ಕೃಷಿ ಬಿತ್ತನೆಗೆ ರೈತರಿಗೆ ಬೀಜ, ರಸಗೊಬ್ಬರಗಳ ಕೊರತೆಂಯಾಗದಂತೆ ಹಾಗೂ ಎಲ್ಲವನ್ನು ಈಗಲೇ ಸಿದ್ಧಪಡಿಸಿಕೊಳ್ಳುವಂತೆ ಸಚಿವರು ಸೂಚಿಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಮಹಾನಗರ ಪಾಲಿಕೆಯ ಆಯುಕ್ತ ಮುಕುಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಿಲ್ಲಾ ಉಸ್ತುವಾರಿ ಸಚಿವರ ನಿವಾಸಕ್ಕೆ ಜನಗಣತಿ ಅಧಿಕಾರಿಗಳು ಭೇಟಿ



**ವಿಜಯಪುರ, ಮೇ.5:** ವಿಜಯಪುರದಲ್ಲಿ ತಂಗಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ದಿ ಸಚಿವರಾದ ಎಂ. ಬಿ. ಪಾಟೀಲ ಅವರ ನಿವಾಸಕ್ಕೆ ಭೇಟಿ ನೀಡಿದ ಜನಗಣತಿ ಅಧಿಕಾರಿಗಳು ಭಾರತ ಜನಗಣತಿ 2027ರ ಮಾಹಿತಿ ವಿವರಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ, ವಲಯ ಆಯುಕ್ತರಾದ ಎಚ್.ಎಸ್. ಚಿತ್ತರಗಿ ಗಣತಿದಾರರಾದ ನೀಲಮ್ಮ ಸಜ್ಜನ ಹಾಗೂ ಮೇಲ್ವಿಚಾರಕರಾದ ಸಿದ್ದಪ್ಪ ದಾನಿ ಹಾಗೂ ಕಂದಾಯ ನಿರೀಕ್ಷಕರಾದ ಕುಮಾರ ಚವಾಣ್ ಉಪಸ್ಥಿತರಿದ್ದರು ಎಂದು ಪ್ರಕಟಣೆಗೆ ತಿಳಿಸಿದೆ.

# ಬದುಕಿನಲ್ಲಿ ಗುರುವಿನ ಋಣ ಬಹಳ ದೊಡ್ಡದು :ಚಂದ್ರಗುಂಡ ಶಿವಾಚಾರ್ಯರು



**ಕಲಬುರಗಿ:ಮೇ.5:** ತಾಲೂಕಿನ ಹೊನ್ನಕಿರಣಗಿ ಶಾಲೆಯಲ್ಲಿ ಓದು ಮುಗಿಸಿದ ಬಳಿಕ ಉದ್ಯೋಗ ಅರಸಿ ನಾನಾ ಕಡೆ ನೆಲೆಗೊಂಡಿದ್ದ 2006 ನೇ ಸಾಲಿನ ಎಸ್, ಎಸ್, ಎಲ್, ಸಿ ವಿದ್ಯಾರ್ಥಿಗಳೆಲ್ಲರೂ ಒಂದೆಡೆ ಸಂಭ್ರಮಿಸಿದರು. ಶಾಲಾ ದಿನಗಳ ಹಳೆಯ ಸವಿ ನೆನಪುಗಳನ್ನು ಮೆಲುಕು ಹಾಕಿದರು. ಸ್ನೇಹ ಸಮ್ಮಿಲನದೊಂದಿಗೆ 20 ವರ್ಷಗಳ ಹಿಂದೆ ಅಕ್ಷರ ಜ್ಞಾನ ಕಲಿಸಿದ ಶಿಕ್ಷಕರನ್ನು ಕರೆತಂದು ಸನ್ಮಾನಿಸಿದರು.

ಹೊನ್ನಕಿರಣಗಿ ಗ್ರಾಮದ ಶ್ರೀ ರಾಚೋಟೇಶ್ವರ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಇಂತಹುದೊಂದು ವಾತಾವರಣ ಕಂಡು ಬಂದಿತು. ಬಹಳ ವಿಶೇಷ ಸಂದರ್ಭ " ಗುರುಗಳಿಂದ ವಿದ್ಯಾರ್ಥಿಗೆ ಕೈತಿತ್ತು" ನೀಡಿರುವುದು . ನಂತರ ಮೊದಲಿನ ಹಾಗೆ ಶಾಲಾಯ ಕೋಣೆಯಲ್ಲಿ ಪಾಠವನ್ನು ಹೇಳಿ ಹಳೆಯ ನೆನಪು ಮತ್ತೆ ಮರುಕಳಿಸುವ ಹಾಗೆ ಮಾಡಿದರು . 20 ವರ್ಷಗ ಹಿಂದೆ ತಮಗೆ ಶಿಕ್ಷಣ, ಸಂಸ್ಕಾರ. ಜೀವನ ಮೌಲ್ಯವನ್ನು ತಿಳಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಶ್ರೀ ರಾಚೋಟೇಶ್ವರ ಸಂಸ್ಥಾನ ಮಠದ ಒಡೆಯರಾದ ಪೂಜ್ಯ ಶ್ರೀ ಚಂದ್ರಗುಂಡ ಶಿವಾಚಾರ್ಯರಿಗೆ ತುಲಾಭಾರ ನೆರವೇರಿಸಿದರು ನಂತರ ಗುರುಗಳಿಗೆ ಗುರು ಮಾತೆಯರಿಗೆ ಸನ್ಮಾನಿಸಲಾಯಿತು, ವಿದ್ಯಾರ್ಥಿಗಳ ಪ್ರಿತಿ, ಅಭಿಮಾನವನ್ನು ಕಂಡು ಹಲವು ಶಿಕ್ಷಕರು ಆನಂದಿಂದ ಕಣ್ಣಿರಾದರು.

ಇದಕ್ಕೆ ಕಾರಣವಾದದ್ದು ಶಾಲೆಯ ಹಳೆಯ ವಿದ್ಯಾರ್ಥಿಗಳಿಂದ ಗುರುವಂದನ ಕಾರ್ಯಕ್ರಮ. ಸಮಾನ ಮನಸ್ಕ ವಿದ್ಯಾರ್ಥಿಗಳ ಸತತ ಪ್ರಯತ್ನದ ಫಲವಾಗಿ ನಡೆದ ಈ ಕಾರ್ಯಕ್ರಮಕ್ಕೆ ಶಾಲೆಯು ಸಾಕ್ಷಿಯಾಯಿತು.

ಹಳೆಯ ವಿದ್ಯಾರ್ಥಿಗಳ ಪೈಕಿ 20 ಕ್ಕೂ ಹೆಚ್ಚು ಮಂದಿ ಸ್ನೆಹ ಸಮ್ಮಿಲನ'ದಲ್ಲಿಒಗ್ಗೂಡಿದ್ದರು. ಎರಡು ದಶಕಗಳ ಬಳಿಕ ಒಬ್ಬರನ್ನೊಬ್ಬರು ನೋಡಿ ಪರಸ್ಪರ ಉಭಯ ಕುಶಲೋಪರಿ ವಿಚಾರಿಸಿದರು. 'ಧಿಸೆಲ್ಫಿ' ಸಂಭ್ರಮದಲ್ಲಿಮುಳುಗೆದ್ದರು.

ಶಾಲೆಯ ಆವರಣದಲ್ಲಿಹಬ್ಬದ ವಾತಾವರಣ ಸೃಷ್ಟಿಯಾಗಿತ್ತು. ವಿದ್ಯಾರ್ಥಿಗಳ ಪ್ರಿ?ತಿ–ಅಭಿಮಾನ ಕಂಡು ಹಲವು ಶಿಕ್ಷಕಿಯರು ಆನಂದ ಭಾಷ್ಪದಿಂದ ಹರಿಸಿ ಹಾರೈಸಿದರು. ಇದೇ ವೇಳೆ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ನಮ್ಮ ಬದುಕಿನಲ್ಲಿ ಮೂರು ವಿಷಯವನ್ನು ಎಂದು ಮರೆಯಬಾರದು . ಭೂಮಿಯ ಋಣ,ತಂದೆತಾಯಿಯ ಋಣ, ವಿದ್ಯೆ ಕಲಿಸಿದ ಗುರುವಿನ ಋಣ, ಅಂತ ಋಣವನ್ನು ಮರೆಯದೆ ಇರುವುದಕ್ಕೆ ಇಂಥ ಕಾರ್ಯಕ್ರಮವಾಗಿದೆ ನಮ್ಮ ಶಿಕ್ಷಣ ಸಂಸ್ಥೆ ಎಷ್ಟು ದೊಡ್ಡ ಮಟ್ಟದಲ್ಲಿ ಬೆಳೆಯಲು ಇಂದು ವೇದಿಕೆ ಮೇಲೆ ಇರತಕ್ಕಂತಹ ಎಲ್ಲಾ ಶಿಕ್ಷಕರು ಕಾರಣ ಎಂದು ಪೂಜ್ಯ ಶ್ರೀ ಚಂದ್ರಗುಂಡ ಶಿವಾಚಾರ್ಯರು ಆಶೀರ್ವಚನ ದಯಪಾಲಿಸಿದರು,

ಗುರುಗಳಾದ ಸಿದ್ದಮಲ್ಲಯ್ಯ ಹಿರೇಮಠರು ಮಾತನಾಡಿ ಗುರುವಂದನೆ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯುತ್ತಿದ್ದು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಹೆಚ್ಚಿಸಿದೆ, ಜ್ಞಾನದ ಹಸಿವನ್ನು ತೀರಿಸಿ ಬದುಕನ್ನು ರೂಪಿಸುತ್ತಿರುವ ಶಿಕ್ಷಕರ ಸೇವೆ ಸ್ಮರಿಸುವುದು ಅವಿಸ್ಮರಣೀಯ ಎಂದರು,

ಗುರುಗಳಾದ ವಿಶ್ವನಾಥ್ ಸರ್. ಅಣ್ಣಾರಯ ಸರ್,ವೇಂಕಟ ರೆಡ್ಡಿ ಸರ್ , ಮಾಂತೂ ಸರ್, ವಿಜಯ್ ಕುಮಾರ ಸರ್ , ಖ್ಯಾದಿಗಮ್ಮ ಮೇಡಂ ನೀಲಕಂಠ ಸರ್,ಚನ್ನು ಸರ್,ಜಯಶ್ರೀ ಮೇಡಂ,ವಿರೇಶ್ ಸರ್,ಭಗವಂತ ಸರ್,ದನರಾಜ್ ಸರ್,ಮಳೇಂದ್ರ ಹಿರೇಮಠ, ಗುರಲಿಂಗಮ್ಮ ಟೀಚೆರ್ ತಮ್ಮ ಮತ್ತು ವಿದ್ಯಾರ್ಥಿಗಳ ನಡುವಿನ ವಿಶೇಷ ಸಂದರ್ಭಗಳನ್ನು ಹಂಚಿಕೊಂಡರು.

ಗುರುವಿಲ್ಲದೆ ಯಾವ ವ್ಯಕ್ತಿಯ ಸಾಧನೆಯು ಅಸಾಧ್ಯ, ಜೀವನದಲ್ಲಿ ತಂದೆ ತಾಯಿ ಗುರುವಾದರೆ ಶಿಕ್ಷಣ ಮೌಲ್ಯವನ್ನು ಪ್ರೇರೇಪಿಸುವವರು ಶಿಕ್ಷಕರಾಗುತ್ತಾರೆ,ಗುರು ಮತ್ತು ಶಿಷ್ಯರ ಮಧ್ಯೆ ಅಪಾರವಾದ ಸಂಬಂಧವನ್ನು ಹೊಂದಿರುತ್ತಾರೆ ಅಂತಹ ಸಂಬಂಧವನ್ನು ಸದಾವಕಾಲ ಇರಿಸಿಕೊಂಡವರು

ವೇದಿಕೆ ಮೇಲಿರುವ ಎಲ್ಲಾ ಗುರುಗಳು ಗುರು ಮಾತೆಯರು ಹೊಂದಿದ್ದಕ್ಕಾಗಿಯೆ ಈ ಗುರು ವಂದನ ಕಾರ್ಯಕ್ರಮ ಎಂದು ಹಳೆಯ ವಿದ್ಯಾರ್ಥಿಯಾದ ಬಂಡಯ್ಯ ಸ್ವಾಮಿ ಸುಂಟನೂರ ಪ್ರಸ್ತಾವಿಕವಾಗಿ ಮಾತನಾಡಿದರು. ವಿಶ್ವರಾಧ್ಯ ಹಿರೇಮಠ ಸ್ವಾಗತಿಸಿದರು, ಗುರುಶಾಂತಮ್ಮ, ಮಹೇಶ್ವರಿ ನಿರೂಪಿಸಿದರು ಮಹಾಂತಯ್ಯ ಹಿರೇಮಠ, ಸಚಿನ್ ಪತ್ತೆಪುರ್ ಅನಿಸಿಕೆ ಹಂಚಿಕೊಂಡರು ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳು, ಗ್ರಾಮಸ್ಥರು ಶ್ರೀಮಠದ ಸಂಸಾರ ಶಿಬಿರದ ವಿದ್ಯಾರ್ಥಿಗಳುಭಾಗವಹಿಸಿದ್ದರು

**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**